# 79

# ಅಂತಿಮ ಮಾತುಗಳು

# (28:11-31)

ಫಲಿತಾಂಶಕ್ಕಾಗಿ ಮನವಿ ಮಾಡಬಹುದಾದ ಒಂದು ಪುಸ್ತಕವಿದ್ದಿದ್ದೇಯಾದರೆ, ಅದು ಅಪೊಸ್ತರಲ ಕೃತ್ಯಗಳು. ಪೌಲನು ಎಫೆಸದಲ್ಲಿರುವಾಗ, "ನಾನು ರೋಮಾಪುರವನ್ನು ... ಸಹ ನೋಡಬೇಕೆಂದು ಹೇಳಿದನು" (ಅಪೊಸ್ತಲರ ಕೃತ್ಯಗಳು 19:21ಬಿ). ಅವನು ರೋಮಾಪುರದಲ್ಲಿರುವ ಕ್ರೈಸ್ತರಿಗೆ ಬರೆಯುವಾಗ, ಅವನು ಸ್ಪೇನ್ ದೇಶಕ್ಕೆ ಹೋಗುವ ಕುರಿತು ತಿಳಿಸಿದನು, "ನಾನು ಸ್ಪೇನ್ ದೇಶಕ್ಕೆ ಹೋಗುವಾಗ ನನ್ನ ಮಾರ್ಗದಲ್ಲಿ ನಿಮ್ಮ ದರ್ಶನವನ್ನು ಮಾಡಬೇಕೆಂಬ ಅಭಿಪ್ರಾಯ ಉಂಟು. ತರುವಾಯ ನಿಮ್ಮ ಸಹವಾಸದಲ್ಲಿ ನನಗೆ ಸ್ವಲ್ಪ ಮಟ್ಟಿಗೆ ಸಂತೃಪ್ತಿಯಾದ ಮೇಲೆ ನೀವು ಆ ದೇಶಕ್ಕೆ ನನ್ನ ಪ್ರಯಾಣವನ್ನು ಸಾಗಿಸುವಿರೆಂದು ನಂಬುತ್ತೇನೆ ಅಂದನು" (ರೋಮಾಪುರ 15:24). ಪೌಲನು ಯೆರೂಸಲೇಮಿನಲ್ಲಿ ಬಂಧಿಸಲ್ಪಟ್ಟಾಗ, ಯೇಸು ಅವನಿಗೆ, "ಧೈರ್ಯದಿಂದಿರು; ನೀನು ಯೆರೂಸಲೇಮಿನಲ್ಲಿ ನನ್ನ ಸಂಗತಿಯನ್ನೆಲ್ಲಾ ಸಾಕ್ಷಿಯಾಗಿ ಹೇಳಿದಂತೆಯೇ ರೋಮಾಪುರದಲ್ಲಿಯೂ ಸಾಕ್ಷಿ ಹೇಳ ಬೇಕಾಗುವದು ಅಂದನು" (ಅಪೊಸ್ತಲರ ಕೃತ್ಯ ಗಳು 23:11ಬಿ). ಅವನ ರೋಮಾಯದ ಬಿರುಗಾಳಿಯ ಪಯಣದಲ್ಲಿ, ದೇವ ದೂತನು ಅವನಿಗೆ, "ಪೌಲನೇ ಭಯಪಡಬೇಡ, ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು" (27:24ಎ).

28:11-31ರ, ನಮ್ಮ ವಾಕ್ಯಭಾಗದಲ್ಲಿ ಅಂತಿಮವಾಗಿ ಪೌಲನು ಐಶ್ವರ್ಯದ ಪಟ್ಟಣವನ್ನು ಸೇರಿದನು. ಕೈಸರನ ಮುಂದೆ ಪೌಲನು ತನ್ನ ಪಿರ್ಯಾದನ್ನು ಹೇಳಿದಾಗ, ಅದರ ಫಲಿತಾಂಶವೇನಾಯಿತು ಎಂದು ನಾವು ಅರಿತಿರುವದಿಲ್ಲ. ಅವನು ಅಪರಾದಿಯಾದನೇ ಅಥವಾ ಬಿಡುಗಡೆಗೊಂಡನೇ? ಅವನು ಸುವಾರ್ತೆಯನ್ನು ತೆಗೆದುಕೊಂಡು ಸ್ಪೇನ್ ದೇಶಕ್ಕೆ ಹೋದನೇ? ಲೂಕನು ಈ ರೀತಿಯಾಗಿ ಬರೆಯುತ್ತಾ, "ತರುವಾಯ ಅವನು ತಾನೇ ಮಾಡಿಕೊಂಡ ಬಾಡಿಗೆಯ ಮನೆಯಲ್ಲಿ ಪುರಾ ಎರಡು ವರಷ ಇದ್ದು ತನ್ನ ಬಳಿಗೆ ಬರುವವರೆಲ್ಲರನ್ನು ಸೇರಿಸಿಕೊಂಡು ಯಾವ ಅಡ್ಡಿಯೂ ಇಲ್ಲದೆ ತುಂಬಾ ಧೈರ್ಯದಿಂದ ದೇವರ ರಾಜ್ಯವನ್ನು ಪ್ರಸಿದ್ಧಿ ಪಡಿಸುತ್ತಾ ಕರ್ತನಾದ ಯೇಸು ಕ್ರಿಸ್ತನ ವಿಷಯವಾಗಿ ಉಪದೇಶಮಾಡುತ್ತಾ ಇದ್ದನು" ಎಂದು ಪುಸ್ತಕವನ್ನು ಅಂತ್ಯಗೊಳಿಸಿರುವನು (28:30, 31).[1] ಪೌಲನ ಕಥೆಯಲ್ಲಿ ಆಸಕ್ತಿ ಹೊಂದಿದವರಿಗೆ ಈ ವಿಧವಾದ ಅಂತ್ಯವು ತುಂಬಾ ಬೇಸರದಾಯಕವೇ.

ಈ ವಿಧವಾದ "ಅರ್ಧಾಂತ್ಯವು," ಅದರಲ್ಲಾದ ಫಲಿತಾಂಶದ ಕುರಿತು ಸಂದೇಹವನ್ನು ಉಂಟುಮಾಡುತ್ತದೆ. ಒಂದು ವೇಳೆ ಲೂಕನು ತಾನು ತಿಳಿಸಲಾರದೆ ಇರಬೇಕೆಂಬ ಫಲಿತಾಂಶದ ಬಗ್ಗೆ ಬರೆದನೇ? ಅಥವಾ ನಾಶವಾದ ಒಂದು ಫಲಿತಾಂಶದ ಕುರಿತು ಬರೆದನೇ? ಒಂದು ವೇಳೆ ಲೂಕನು ಮೂರನೇ ಪುಸ್ತಕವನ್ನು ಬರೆಯುವ ಉದ್ದೇಶವನ್ನೇನಾದರೂ ಹೊಂದಿದ್ದನೆ? ಹಾಗಿದ್ದರೆ ಪವಿತ್ರಾತ್ಮನು ಮಾರ್ಗ ದರ್ಶನದಲ್ಲಿ ಬರೆದ ಲೂಕನು ಅಪೊಸ್ತಲ ಕೃತ್ಯವನ್ನು ಏಕೆ ಈ ರೀತಿ ಅಂತ್ಯಗೊಳಿಸಿದನು? ಪೌಲನ ಜೀವಿತ ಚರಿತ್ರೆಯನ್ನು ಬರೆಯುವದು ಲೂಕನ ಉದ್ದೇಶವಾಗಿರದೆ, ಸುವಾರ್ತೆಯು ರೋಮಾಯವನ್ನು ತಲುಪಿ ಹೇಗೆ ದನ್ಯವಾಯಿತು ಎಂದು ಬರೆದಿರುವದು. ಎಂದು ನಾವು ಉದ್ದೇಶವನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದರೆ, ಇದರ ಈ ವಿಧವಾದ ಅಂತ್ಯದಿಂದ ನಿರಾಶೆಗೊಳ್ಳುವದಿಲ್ಲ, ಆದರೆ ಜಯಧ್ವನಿಯನ್ನು ಎತ್ತಿ! ಅಡಚಣೆಗಳ ನಡುವೆಯೂ, ದೇವರು ತನ್ನ ಉದ್ದೇಶವನ್ನು ಈಡೇರಿಸಿಕೊಂಡನು!

ಅಂತಿಮ ಮಾತುಗಳಲ್ಲಿರುವ ಪ್ರಮುಖ ಪದವೇನೆಂದರೆ, "ಯಾವ ಅಡ್ಡಿಯೂ ಇಲ್ಲದೆ": "ತರುವಾಯ ಅವನು ತಾನೇ ಮಾಡಿಕೊಂಡ ಬಾಡಿಗೆಯ ಮನೆಯಲ್ಲಿ ಪುರಾ ಎರಡು ವರುಷ ಇದ್ದು ತನ್ನ ಬಳಿಗೆ ಬರುವವರೆಲ್ಲರನ್ನು ಸೇರಿಸಿಕೊಂಡನು. ಯಾವ ಅಡ್ಡಿಯೂ ಇಲ್ಲದೆ ತುಂಬಾ ಧೈರ್ಯದಿಂದ ದೇವರ ರಾಜ್ಯವನ್ನು ಪ್ರಸಿದ್ಧಿ ಪಡಿಸುತ್ತಾ ಕರ್ತನಾದ ಯೇಸುಕ್ರಿಸ್ತನ ವಿಷಯವಾಗಿ *ಉಪದೇಶಮಾಡುತ್ತಾ* ಇದ್ದನು" (ಒತ್ತಿ ಹೇಳಿದ್ದು ನನ್ನದು). ಮೂಲ ವಾಕ್ಯದಲ್ಲಿ ಈ ಪದವನ್ನು ವಚನದ ಅಂತ್ಯದಲ್ಲಿ ಒತ್ತಿ ಹೇಳಲಾಗಿದೆ NASBಯ ಅನುವಾದವು ಸಹ ಈ ರೀತಿಯಾಗಿಯೇ ಇರುತ್ತದೆ. ಸುವಾರ್ತೆಗೆ ವಿರೋಧವಾದವರ ನಡುವೆಯೂ, ಈ ಸಮ್ರಾಜ್ಯದಲ್ಲಿ ಸುವಾರ್ತೆಯು ಅಡ್ಡಿ ಇಲ್ಲದೆ ಪ್ರಸಿದ್ಧಿಗೊಂಡಿತು: ರೋಮಾಯ ಅಧಿಕಾರಿಗಳು ಅದನ್ನು ವಿರೋಧಿಸಲಿಲ್ಲ. ಯೆಹೂದ್ಯ ಪ್ರಧಾನರಿಂದಲೂ ಯಾವುದೇ ಅಡ್ಡಿ ಉಂಟಾಗಲಿಲ್ಲ, ಸೈತಾನನಿಂದಲೂ ಅಡ್ಡಿಯಾಗಲಿಲ್ಲ ಯೇಸುವಿನ ಶುಭ ಸಮಾಚಾರವು ಪ್ರಧಾನ ಪಟ್ಟಣದಿಂದ ಹೊರಟು ಸಾಮ್ರಾಜ್ಯದಲ್ಲೆಲ್ಲಾ ಹರಡಿತು! 30 ಮತ್ತು 31ನೇ ವಚನಗಳನ್ನು ಓದುವಾಗ, ಲೂಕನು ಬರೆದಂತೆ: ಹೃದಯದಲ್ಲಿ ಆನಂದಿಸಿರಿ!

"ಅಂತಿಮವಾದ" ಪದವನ್ನು ನೋಡಿರಿ, "ಯಾವ ಅಡ್ಡಿಯೂ ಇಲ್ಲದೆ" ಎಂದಿರುವದರಿಂದ, ವಚನ 11 ರಿಂದ 31ರ ವರೆಗಿನ ವಾಕ್ಯದಲ್ಲಿ ಅಡ್ಡಿಯಾಗದ ಪಾಠವನ್ನೂ ಮತ್ತು ಪ್ರತಿ ನಕರಾತ್ಮ ಕವಾದ ಸಂಗತಿಗಳು ಸಕಾರಾತ್ಮಕವಾದ ವಿಚಾರವನ್ನು ಕೂಡ ನೋಡೋಣ.

## ಪ್ರಯಾಣದ ಕುರಿತ ಅಂತಿಮ ಮಾತುಗಳು (28:11-16)

### ತಡವಾದದ್ದರಿಂದ ಅಡ್ಡಿಯಾಗಲಿಲ್ಲ (ವಚನ 11)

ಪೌಲ ಮತ್ತು ಅವನ ಸಂಗಡಿಗರು ಮೆಲೀತೆಯಲ್ಲಿ ಮೂರು ತಿಂಗಳ ಕಾಲ ಇದ್ದರು (ವಚನ 11ಎ) - ಪ್ರಾಯಶಃ ನವಂಬರ್, ಡಿಸೆಂಬರ್, ಮತ್ತು ಜನವರಿ ತಿಂಗಳುಗಳಿರ ಬಹುದು. ದೇವರು ಪೌಲನನ್ನು ಯಾವ ಕಾರಣದಿಂದ ಮೂರು ತಿಗಳುಗಳ ಕಾಲ ಆ ದ್ವೀಪದಲ್ಲಿ ಇರಿಸಿದನೆಂದು ನಾವು ಅರಿಯೆವು. ಒಂದು ವೇಳೆ ಈ ಅವಧಿಯು ಪೌಲನಿಗೆ ವಿಶ್ರಾಂತಿಯ ಸಮಯವಾಯಿತೇ? ಅವನು ಕೈಸರೈಯಲ್ಲಿ ಎರಡು ವರ್ಷಗಳ ಕಾಲ ಕೆಲಸವಿಲ್ಲದೆ ಇದ್ದ ಕಾರಣ ಈ ಅವಧಿಯಲ್ಲಿ ತರಬೇತುಗೊಂಡನೇ? ಅಥವಾ ದ್ವೀಪದಲ್ಲಿದ್ದವರು ಕ್ರೈಸ್ತರಾಗುವದಕ್ಕೆ ಅವಕಾಶವನ್ನು ನೀಡಿದ್ದನೇ? ದೇವರ ಕಾರಣಗಳು ಏನೇ ಇದ್ದರು ತಡವಾದದ್ದಕ್ಕೆ ಪೌಲನು ಕೃಪೆಯಿಂದ ಕಾದುಕೊಂಡನು ಎಂದು - ಈ ಹಿಂದೆ ಈ ವಿಚಾರವನ್ನು ನೋಡಿದ್ದೇವೆ.

### ಮೂಢನಂಬಿಕೆಗಳು ಅಡ್ಡಿಪಡಿಸಲಿಲ್ಲ (ವಚನ 11)

ಚಳಿಗಾಲದ ತಿಂಗಳಿನಲ್ಲಿ, ಯೂಲ್ಯನು, ಪೌಲನನ್ನು ಹಾಗೂ ಅವನ ಸಂಗಡಿಗರನ್ನು ರೋಮಾಯಕ್ಕೆ ಕರಕೊಂಡು ಹೋಗುವ ಸಲುವಾಗಿ ಅಲಕ್ಸಾಂದ್ರಿಯದ ಇನ್ನೊಂದು ಹಡಗನ್ನು ಕಂಡುಕೊಂಡನು (27:6; 28:11). ಈ ಹಡಗು ಚಳಿಗಾಲವನ್ನು ದ್ವೀಪದಲ್ಲಿ ಕಳೆದಿತ್ತು. ಬಹುಶಃ ವಲ್ಲೇಟ್ ಎಂಬ ರೇವಿನಲ್ಲಿರಬಹುದು, ಅದು ಈಶಾನ್ಯ ಕರಾವಳಿಯ ದ್ವೀಪಗಳಲ್ಲಿ ಮೆಡಿಟರೇನಿಯನ್ನಿನ ಪ್ರಮುಖ ರೇವು ಪಟ್ಟಣವಾಗಿತ್ತು.

ಮೂರು ಅಥವಾ ನಾಲ್ಕು ದಿನಗಳೆಲ್ಲೇ ಹಡಗು ನಿಗಧಿತವಾದ ಸ್ಥಳವನ್ನು ಸೇರಬೇಕಿದ್ದರು ಚಳಿಗಾಲವನ್ನು ಕಳೆಯುವದಕ್ಕೋಸ್ಕರ ಒತ್ತಾಯಪೂರ್ವಕವಾಗಿ ನಿಲ್ಲಿಸಿದರು, ಹಡಗಿನ ಯಜಮಾನನು ಪ್ರಯಾಣವನ್ನು ಪೂರ್ಣ ಮಾಡಲು ಉತ್ಸುಕನಾಗಿದ್ದನು.[2]

ಆ ಹಡಗಿನ ಕುರಿತು ಲೂಕನು ವಿಶೇಷವಾದ ಟಿಪ್ಪಣಿಯನ್ನು ನೀಡಿ: "ಅದಕ್ಕೆ ಅಶ್ವಿನಿ ದೇವತೆಗಳೆಬ ಚಿಹ್ನೆಗಳಿದ್ದವು" (ವಚನ 11ಬಿ). ಗ್ರೀಕ್ ಭಾಷೆಯಲ್ಲಿನ "ಅವಳಿ ಜವಳಿ ಸಹೋದರರು" ಅಂದರೆ "ಜಿಯೋಸನ ಮಕ್ಕಳು" ಎಂಬ ಅರ್ಥವಾಗಿದೆ. ಗ್ರೀಕ್ ರೋಮಾಯರ

ಕಾಲ್ಪನಿಕ ಕಥೆಯ ಪ್ರಕಾರ, ಕ್ಯಾಸ್ಟರ್ ಮತ್ತು ಪೋಲುಕ್ಸ್ (KJV) ಜಿಯೋಸನ ಮಕ್ಕಳಾಗಿದ್ದರು (ಜುಪಿಟರ್)[3] ಈ ಸಹೋದರರು ನಾವಿಕರಿಗೆ ಮಾದರಿ ದೇವತೆಗಳಾಗಿದ್ದರು.[4] ಈ ಅಲೆಕ್ಸಾಂದ್ರಿಯದ ಹಡಗು ಅಶ್ವಿನಿ ದೇವತೆಗಳ ಚಿಹ್ನೆಯನ್ನು ಹೊಂದಿತ್ತು.

ಲೂಕನ ಟಿಪ್ಪಣಿಯ ಪ್ರಕಾರ ಲೂಕನು ಸಹ ಅಲ್ಲಿದ್ದನು;[5] ಎಂಬುದಾಗಿ ಸಾಕ್ಷಿಕರಿಸಿದೆ. ಹಾಗೂ ಆ ಚಿಹ್ನೆಗಳು ಮೂಢನಂಬಿಕೆಯ ಗುರುತಾಗಿದ್ದರಿಂದ ಮೊದಲ ಶತಮಾನದ ಸುವಾರ್ತಿಕರುಗಳು (ಈ ದಿನಗಳಲ್ಲೂ ಮೂಢನಂಬಿಕೆಗಳನ್ನು ನಾವು ಎದುರಿಸುತ್ತಿದ್ದೇವೆ). ಈ ಮೂಢನಂಬಿಕೆಗಳನ್ನು ಎದುರಿಸಬೇಕಾಯಿತು. ಒಂದು ವಿಚಾರವು ಸ್ಪಷ್ಟವಾಗಿತ್ತು: ಈಗಾಗಲೇ ನಾಶವಾಗಿದ್ದ ಅಲೆಕ್ಸಾಂದ್ರಿಯದ ಹಡಗಿಗೆ ಈ ದೇವತೆಗಳಿಂದ ಯಾವ ಸಹಾಯವು ಒದಗಿಬಂದಿರಲಿಲ್ಲ! ಅವರ ಪ್ರಯಾಣಿಕರು ಜೀವವುಳ್ಳ ದೇವರಿಗೆ ಕೃತಜ್ಞರಾಗಿ ಆತನೇ, "ಒಬ್ಬನೆ ದೇವರು, ಒಬ್ಬನೇ ತಂದೆಯು, ಎಂದು ತಿಳಿದು ಎಲ್ಲವನ್ನು ಸಮರ್ಪಿಸಿದ್ದರು" (1 ಕೊರಿಂಥ 8:6ಎ; ಅಪೊಸ್ತಲರ ಕೃತ್ಯಗಳು 27:24 ನೋಡಿರಿ).

## ಹವಾಮಾನದಿಂದ ಅಡ್ಡಿಯಾಗಲಿಲ್ಲ (ವಚನಗಳು 12, 13)

ಅವರ ಹಿಂದಿನ ಸಮುದ್ರ ಪ್ರಯಾಣದಲ್ಲಿ ಬಿರುಗಾಳಿಯು ಅವರಿಗೆ ಅಡ್ಡಿವುಂಟುಮಾಡಿತು (ಅಪೊಸ್ತಲರ ಕೃತ್ಯಗಳು 27:4). ಈಗ, ಹಡಗು ಯಾವ ಅಡತಡೆಗಳಿಲ್ಲದೆ ಸೇರಬೇಕಾದ ಸ್ಥಳಕ್ಕೆ ಸುಗಮವಾಗಿ ಸಾಗುತ್ತಿತ್ತು. ಅದು ಸಿಸಿಲೀಯ[6] ಸುರಕೂಸಿಗೆ ಅರವತ್ತು ಮೈಲುಗಳ ಈಶಾನ್ಯಕ್ಕೆ ಪ್ರಯಾಣ ಮಾಡಿತ್ತು. ಅದರ ವರದಿಯನ್ನು ಲೂಕನು ತಿಳಿಸಿ: "ನಾವು ಸುರಕೂಸಿಗೆ ಮುಟ್ಟಿ ಅಲ್ಲಿ ಮೂರು ದಿವಸ ನಿಂತೆವು" (28:12). ಹಡಗಿನ ಹೊಣೆ ಹೊತ್ತವರು ತಮ್ಮ ವ್ಯವಹಾರಗಳನ್ನು ಮಾಡಿದ್ದರು ನಂತರ ಅವರು ಉತ್ತಮವಾದ ವಾತಾವರಣಕ್ಕಾಗಿ ಕಾದುಕೊಂಡು ಮೆಸೀನಾ ಎಂಬ ಕಾಲುವೆಯಲ್ಲಿ ಪ್ರಯಾಣಿಸಲು ಸಿದ್ಧರಾಗಿದ್ದರು. ಈ ಕಾಲುವೆಯಲ್ಲಿ ಅಪಾಯಕಾರಿಯಾದ ಸುಳಿಗುಂಡಿಗಳಿದ್ದವು.[7] ಅವರ ಮುಂದಿನ ಇಪ್ಪತುನಾಲ್ಕು ತಾಸುಗಳಲ್ಲಿ ಎಪ್ಪತ್ತು ಮೈಲುಗಳಷ್ಟು ಪ್ರಯಾಣಿಸಲು ಬಲವಾದ ಗಾಳಿಯ ಅಗತ್ಯತೆ ಇತ್ತು.

ಅಂತಿಮವಾಗಿ ಅವರು ಸುರಕೂಸನ್ನು ಬಿಟ್ಟರು. "ಅಲ್ಲಿಂದ ನಾವು ಸುತ್ತಿಕೊಂಡು ಹೋಗಿ[8] ರೇಗಿಯಕ್ಕೆ ಸೇರಿದವು" (ವಚನ 13ಎ), ಅದು ಇಥಾಲ್ಯದ ಕೆಳಭಾಗದಲ್ಲಿದ ಪಟ್ಟಣವಾಗಿತ್ತು. ರೇಗಿಯದಿಂದ, ಅವರು ಹೊರಟು ಇನ್ನೂರು ಮೈಲಿಗಳ ಉತ್ತರದಲ್ಲಿದ್ದ ವ್ಯಾಪಾರ ಕೇಂದ್ರವಾದ ಪೂತಿಯೋಲಕ್ಕೆ ಸಾಗಬಹುದಿತ್ತು. "ಒಂದು ದಿನವಾದ ಮೇಲೆ ತೆಂಕಣ ಗಾಳಿ ಹುಟ್ಟಿದ್ದರಿಂದ" (ವಚನ 13ಬಿ), ಅವರು ಇಥಾಲ್ಯದ ಕರಾವಳಿಯಲ್ಲಿ ಸಾಗುವಾಗ "ಪಾಂಪೆಯ ವೆಸುವಿಯಸ್ಸಿಂದ ಹೊರಟ ಗಾಢವಾದ ಹೊಗೆಯನ್ನು ನೋಡಿರಬಹುದು."[9] ಉತ್ತಮವಾದ ಪ್ರಯಾಣವನ್ನು ಮಾಡಿ, ಎರಡನೆಯ ದಿನದಲ್ಲಿ [ಅವರು] ಪೊತಿಯೋಲಕ್ಕೆ ಬಂದರು (ವಚನ 13ಸಿ).

ಪೊತಿಯೋಲವು ನೇಪಲ್ಸ್‌ನ ಬಳಿ ಇರುತ್ತದೆ, ಅದು ರೋಮಾಯದ ಪ್ರಧಾನ ರೇವು ಪಟ್ಟಣವಾಗಿತ್ತು. ಪೌಲ ಮತ್ತು ಅವನ ಸಂಗಡಿಗರು ಹಡಗಿನಿಂದ ಇಲ್ಲಿ ಇಳಿದು, ಇಲ್ಲಿಂದ ರೋಮಾಯಕ್ಕೆ ಎಪ್ಪತ್ತು - ಐದು ಮೈಲುಗಳ ಅಂತರವನ್ನು ನಡೆದುಕೊಂಡು ಹೋಗಬೇಕಿತು.

## ದಿಗಿಲುಗಳು ಅವರಿಗೆ ಅಡ್ಡಿಮಾಡಲಿಲ್ಲ (ವಚನಗಳು 14, 15)

ಯಾವಾಗಲೂ ನೀನು ಸಂದರ್ಶಿಸಲು ಬಯಸುವ ಸ್ಥಳಕ್ಕೆ ನೀನು ಹತ್ತಿರವಾಗುವಾಗ, ನೀವು ಭಯಗೊಂಡಿರುವಿರಾ? ಪೌಲನು ಪೊತಿಯೋಲದಲ್ಲಿ ನಿಂತಿರುವಾಗ, ಸಹಜವಾದ ಭಯವು ಅವನಲ್ಲಿ ಉಂಟಾಗಿರಬಹುದು (15 ವಚನದ ಅಂತಿಮ ಭಾಗವನ್ನು ನೋಡಿರಿ). ಉತ್ತರದ ಕಡೆಯಲ್ಲಿ ರೋಮಾಯರ ಯುದ್ಧ ನೌಕೆಗಳಿದ್ದವು, ಅದು ರೋಮಾಯರ ಶಕ್ತಿಯನ್ನು

ಸಾರುತ್ತಿತ್ತು. ಹತ್ತಿರದಲ್ಲೇ ಶ್ರೀಮಂತರ ಹಾಯಿದೋಣಿಗಳಿದ್ದವು, ಅದು ರೋಮಾ ಯರ ಲೌಕಿಕತ್ವದ ಚಿಹ್ನೆಯಾಗಿತ್ತು. ಅದರ ಸಂಗಡ ಪೌಲನು ಸಾಮಾಜಿಕ ಸವಾಲನ್ನು ಹೊಂದಿದ್ದನು. ಅಲ್ಲಿಯ ಸಹೋದರರು ಅವನನ್ನು ಯಾವ ರೀತಿಯಲ್ಲಿ ಸ್ವೀಕರಿಸಬಹುದೆಂದು ಯೋಚಿಸಿಕೊಂಡು, ರೋಮಾಯಕ್ಕೆ ಖೈದಿಯಾಗಿ ನಡೆದು ಹೋದನು.[10]

ಪುನಃ ದೇವರು ಅವನಿಗೆ, "ತಾನು ಕನಿಕರವುಳ್ಳ ತಂದೆಯೂ ಸಕಲ ವಿಧವಾದ ಸಂತೈಸುವ ದೇವರು" (2 ಕೊರಿಂಥ 1:3ಬಿ). ಎಂದು ರುಜುವಾತು ಪಡಿಸಿದನು. "ಪೊಸಿಯೋಲದಲ್ಲಿ ಕ್ರೈಸ್ತ ಸಹೋದರರನ್ನು ಕಂಡು ಸಮಾಧಾನಗೊಂಡನು" (ವಚನ 14ಎ). ಸಹಜವಾಗಿ ಸುವಾರ್ತೆಯು ರೋಮಾಯದ ಈ ಪಟ್ಟಣದಲ್ಲಿ ಹರಡಿಕೊಂಡಿತ್ತು. "ಅಲ್ಲಿನ ಕ್ರೈಸ್ತ ಸಹೊದರರು ನಮ್ಮನ್ನು ತಮ್ಮ ಬಳಿಯಲ್ಲಿ ಏಳು ದಿವಸ ಇರಬೇಕೆಂದು ಬೇಡಿ ಕೊಂಡರು" (ವಚನ 14ಬಿ). ಬಹುಶಃ ಪೌಲನು ಅಲ್ಲಿ ಸೋಮವಾರ ಹೋದದ್ದರಿಂದ, ಮುಂದಿನ ಭಾನುವಾರ ರೊಟ್ಟಿ ಮುರಿಯುವ ಸಮಯದವರೆಗೂ ಅವರ ಸಂಗಡ ಇರ ಬೇಕೆಂದು ಮನವಿ ಮಾಡಿಕೊಂಡರು.[11] ಹೇಗಿದ್ದರೂ, ಒಂದು ವಾರ ಕಾಲದಲ್ಲಿ ಕರ್ತನ ದಿನವು ಸಹ ಒಳಗೊಂಡಿತ್ತು, ಆ ಸಮಯದಲ್ಲಿ ಸೇರಿ ಬಂದ ಸಕಲ ಸಹೋದರರ ಅನ್ಯೋ ನ್ಯತೆಯನ್ನು ಪೌಲನು ಅನುಭವಿಸುವದಕ್ಕಿದ್ದನು. ಈ ಹಿಂದೆ ಸೀದೋನಿನಲ್ಲಿ ನಡೆದಂತೆ (27:3), ಶತಾಧಿಪತಿಯು, ಪೌಲನಿಗೆ ಅವನ ಸ್ನೇಹಿತರನ್ನು ಸಂಧಿಸುವ ಸ್ವತಂತ್ರವನ್ನು ನೀಡಿ ದನು.

ಅವರು ರೋಮಾಯಕ್ಕೆ ಸಮೀಪರಾಗಿರುವಾಗ, ಶತಾಧಿಪತಿಯು ತಮ್ಮ ಪ್ರಯಾಣವನ್ನು ಏಕೆ ಒಂದು ವಾರ ಕಾಲ ಮುಂದೂಡಿದನು ಎಂಬದು ಗೌಪ್ಯವಾಗಿದೆ. ಅವನು ಅಲ್ಲಿ ಯಾವುದಾದರು ವ್ಯವಹಾರವನ್ನು ಹೊಂದಿದ್ದನೇ? ಬಿರುಗಾಳಿಯಲ್ಲಿ ನಷ್ಟವಾದ ಸಂಗತಿಗಳನ್ನು ಅವನು ಮರು ನಿರ್ಮಿಸಬೇಕಾಗಿತ್ತೇ? ಅಥವಾ ಅವನು ರೋಮಾಯರ ಅಪ್ಪಣೆಗಾಗಿ ಕಾದನೇ? ಇವುಗಳಲ್ಲಿನ ಯಾವ ಅಂಶಗಳು ಸಹ ಈ ಏಳು ದಿನಗಳ ವಿಚಾರವನ್ನು ವಿವರಿಸಲಾರವು. ಅವನು ಒಂದು ವೇಳೆ ಪೌಲನಿಗಾಗಿ ಒಂದು ವಾರ ಕಾಲವನ್ನು ತಳ್ಳಿರಬಹುದು. ನಿಶ್ಚಯ ವಾಗಿಯೂ ಅವನು ಪೌಲನ ಪ್ರಭಾವವನ್ನು ಹೊಂದಿದ್ದನು. ಅವನು ಸುವಾರ್ತೆಯಿಂದ ಪರಿಣಾಮ ಹೊಂದಿದ ಕ್ರೈಸ್ತನಾಗಿರುವ ಸಾಧ್ಯತೆಯು ಇರುತ್ತದೆ.[12]

ಪೊತಿಯೋಲದಲ್ಲಿ ಅವರುಗಳು ಏಳು ದಿನಗಳ ಕಾಲ ತಂಗಿರುವಾಗ, ಪೌಲನು ರೋಮಾಯಕ್ಕೆ ಬಂದ ಸುದ್ದಿಯನ್ನು ಅಲ್ಲಿದ್ದ ಕ್ರೈಸ್ತರು ಅರಿತರು. ಆಗ ತಕ್ಷಣವೇ, ಕೆಲವರು ಅವನನ್ನು ಸಂಧಿಸಿದರು (ವಚನ 15). ರೋಮಾಪುರ ಪತ್ರಿಕೆಯ ಅಂತ್ಯದಲ್ಲಿ, ಪೌಲನು ರೋಮಾಯದ ಇಪತ್ತಾರು ಸ್ನೇಹಿತರ ಪಟ್ಟಿಯನ್ನು ನೀಡಿರುವನು; ಆ ಸ್ನೇಹಿತರುಗಳೇ ಎರಡು ಗುಂಪಾಗಿ ದಕ್ಷಿಣಕ್ಕೆ ಹೊರಟಿರಬಹುದು.

ಏಳು ದಿನಗಳ ತರುವಾಯ ಆ ರೇವು ಪಟ್ಟಣದಿಂದ, ಪೌಲ ಮತ್ತು ಅಧಿಕಾರಿಗಳು ಅಪ್ಪಿಯ ಪೇಟೆಗೆ ಹೊರಟರು, ಅದು ರೋಮಾಯರ ಪ್ರಸಿದ್ಧವಾದ ಮಾರ್ಗವಾಗಿತ್ತು.[13] ಅವರು ಅರ್ಧದಾರಿ ಪ್ರಯಾಣಿಸಿದ ನಂತರ, ಅವರು ಒಂದು ಸ್ವಾಗತ ಸಮಿತಿಯನ್ನು ಎದುರುಗೊಂಡರು. ಲೂಕನು ಬರೆದು: "ಅಲ್ಲಿದ್ದ ಸಹೋದರರು ನಮ್ಮ ಸಮಾಚಾರವನ್ನು ಕೇಳಿದಾಗ ನಮ್ಮನ್ನು ಎದುರುಗೊಳ್ಳವದಕ್ಕಾಗಿ ಕೆಲವರು ಅಪ್ಪಿಯ ಪೇಟೆಯವರೆಗೂ[14] ಕೆಲವರು ತ್ರಿಛತ್ರವೆಂಬ[15] ಸ್ಥಳದವರೆಗೂ ಬಂದರು" (ವಚನ 15ಎ). ಆಯಾಸಗೊಂಡ ಪ್ರಯಾಣಿಕರಿಗಾಗಿ ಅಪ್ಪಿಯ ಮಾರ್ಗದ ನಡುವೆ ವಿಶ್ರಾಂತಿಯನ್ನು ನೀಡಲಾಯಿತು, ಹಾಗೂ ಅಲ್ಲಿ ಅತಿಥಿ ಸತ್ಕಾರವೂ ಹೆಚ್ಚಾಯಿತು. ಅಪ್ಪಿಯ ಮಾರ್ಗದಲ್ಲಿ, ಪ್ರಧಾನ ಪಟ್ಟಣಕ್ಕೆ ಹತ್ತು ಮೈಲು ದೂರದಲ್ಲಿ ತಿಛತ್ರವೆಂಬ ಸ್ಥಳವು ಇತ್ತು.[16]

ಗ್ರೀಕ್ ಭಾಷೆಯ "ಎದುರುಗೊಳ್ಳು" ವಚನ 15ರ ಪದವನ್ನು ಅಧಿಕಾರಿಗಳು, "ಪಟ್ಟಣಕ್ಕೆ ಬರುವವರನ್ನು ಸ್ವಾಗತಿಸುವ ಪರಿಗೆ ಬಳಸುವ ಪದವಾಗಿತ್ತು. ಒಂದು ವೇಳೆ ಅವರಗಳು ಹೋಗಿ

(ಪೌಲನನ್ನು) ಅವನ್ನು ವಂದಿಸಿ, ಅವರ ಪ್ರಯಾಣದ ಅಂತ್ಯದಲ್ಲಿ ಅವರನ್ನು ಪಟ್ಟಣದೊಳಗೆ ಕರೆತಂದಿರಬಹುದು."[17] ಈ ವಿಧವಾದ ಸ್ವಾಗತವನ್ನು ಕಂಡು ಪೌಲನ ಭಯವು ಮಾಯವಾಗಿ ಧೈರ್ಯಗೊಂಡನು! ಆದ್ದರಿಂದ ಲೂಕನು, "ಪೌಲನು ಅವರನ್ನು ನೋಡಿ ದೇವರ ಸ್ತೋತ್ರವನ್ನು ಮಾಡಿ ಧೈರ್ಯಗೊಂಡನು" (ವಚನ 15ಬಿ) ಎಂದು ಬರೆದಿರುವನು. ಅವನ ಹಳೆಯ ಹಾಗೂ ಹೊಸ ಸ್ನೇಹಿತರು ಪೌಲನನ್ನು ಸ್ವಾಗತಿಸಿದಾಗ ಅವನಿಗಾದ ಕಣ್ಣೀರನ್ನು ನಾನು ಕಾಣುತ್ತೇನೆ.

ಸ್ವಲ್ಪ ಸಮಯದ ನಂತರ ರೋಮಾಯದ ಪ್ರಯಾಣವು ಅಂತ್ಯಗೊಂಡಿತು. ಎಂಥಾ ಒಂದು ಅದ್ಭುತ ದೃಶ್ಯ ಅದಾಗಿತ್ತು. ರೋಮಾಯದ ಶಿಸ್ತಿನ ಸಿಪಾಯಿಗಳು, ಮುನಿಸಿಕೊಂಡ ಅಪರಾಧಿಗಳು, ಮುಗುಳ್ನಗುತ್ತಾ ಅಪ್ಪಿಯ ಮಾರ್ಗದಲ್ಲಿ ನಡೆಯುತ್ತಿದ್ದ ಕ್ರೈಸ್ತರು! ಅದ್ದರಿಂದ ಲೂಕನು, "ನಾವು ರೋಮಾಪುರಕ್ಕೆ ಬಂದೆವು ಎಂದು ಬರೆದನು" (ವಚನ 14ಸಿ).

**ಬೆದರಿಕೆಗಳು ಅಡ್ಡಿ ಉಂಟುಮಾಡಲಿಲ್ಲ (ವಚನಗಳು 14, 16)**

ಲೂಕನು ಈ ಪ್ರಯಾಣದ ಕುರಿತು, "ನಾವು[18] ರೋಮಾಪುರಕ್ಕೆ ಬಂದ ಮೇಲೆ[19] ಪೌಲನು ತನ್ನನ್ನು ಕಾಯುತ್ತಿದ್ದ ಸಿಪಾಯಿಯೊಂದಿಗೆ ಪ್ರತ್ಯೇಕವಾಗಿರಬಹುದೆಂಬ[20] ಅಪ್ಪಣೆಯನ್ನು ಹೊಂದಿದನು" (ವಚನ 16). ಸಮಾನ್ಯವಾದ ಸೆರೆಯಲ್ಲಿ ಇರುವದಕ್ಕಿಂತಲೂ ಇದು ಉತ್ತಮವಾಗಿತ್ತು. ಮತ್ತು ಅವನೇ ಮಾಡಿಕೊಂಡಿದ್ದ ಬಾಡಿಗೆ (ವಚನ 30)[21] ಮನೆಯಲ್ಲಿ, ಅಂಗರಕ್ಷಕರೊಡನೆ ಇದ್ದನು (ವಚನ 20).

ಅಂತಿಮವಾಗಿ, ಪೌಲನು ತಾನು ಇಚ್ಚಿಸಿದ ಪಟ್ಟಣಕ್ಕೆ ಬಂದನು. ಅವನು ಸರಪಳಿಗಳಿಂದ ಕಟ್ಟಲ್ಪಟ್ಟವನಾಗಿ, ಆ ಬೀದಿಗಳಲ್ಲಿ ಸಂಚರಿಸುವಾಗ, [22] ಯಾವ ಯೋಚನೆಯನ್ನು ಮಾಡಿರಬಹುದು? ಸಹಜವಾಗಿ, ಲೂಕನ ಹೇಳಿಕೆಯಲ್ಲಿ ತೃಪ್ತಿಕರವಾದ ಉತ್ತರವಿರುವದಿಲ್ಲ. ಪೌಲನು ಅಲ್ಲಿ ಪ್ರವಾಸಿಯಾಗಿ ಹೋಗಿರಲಿಲ್ಲ, ಆದರೆ ಕರ್ತನ ಸಾಕ್ಷಿಯಾಗಿ ಹೋಗಿದ್ದನು (23:11). ಹೇಗೋ ಆ ದೊಡ್ಡ ಪುರಾತನ ಪಟ್ಟಣದಲ್ಲಿ ಪೌಲನು ವಿಶಿಷ್ಟವಾದ ಸವಾಲನ್ನು ಎದುರಿಸಬೇಕಿತ್ತು.

ಪೌಲನು ನಡೆದಿರುವ ಕಠಿಣವಾದ ಹಾಗೂ ಸವೆದು ಹೋಗಿರುವ ಅಪ್ಪಿಯ ಮಾರ್ಗದಲ್ಲಿ ನಾನು ನಡೆದಿರುವೆನು ಅಲ್ಲಿದ್ದ ಬಾಗಿಲಿನಲ್ಲೇ ಪೌಲನು ಪ್ರವೇಶ ಮಾಡಿದ್ದನು. ಆ ಸಮಯದಲ್ಲಿ ಅಲ್ಲಿದ್ದ ಅನ್ಯ ದೇವತೆಗಳ ಅಳಿದುಳಿದ ದೇವಾಲಯಗಳನ್ನು ನಾನು ನೋಡಿರುವೆನು. ಒಂದು ಕಾಲದಲ್ಲಿ ವಿಜೃಂಬಣೆಯಿಂದ ಮೆರೆಯುತ್ತಿದ್ದ ಸಾವಿರಾರು ಸ್ಥಳಗಳಾದ, ವಾಣಿಜ್ಯ, ಸಮಾಜಿಕ, ಧಾರ್ಮಿಕ, ಹಾಗೂ ರಾಜಕೀಯ ಕೇಂದ್ರಗಳನ್ನು ನಾನು ಗಮನಿಸಿರುವೆನು. ಆ ಸಾಮ್ರಾಜ್ಯದ ಬಂಗಾರದ ಮೈಲುಗಲ್ಲುಗಳನ್ನು ನಾನು ಸ್ಪರ್ಶಿಸಿರುವೆನು. ನೀರೋ ಚಕ್ರವರ್ತಿಯ ಅರಮನೆಯಿದ್ದ ಪಲತೀನ ಬೆಟ್ಟದ ಮೇಲೆ ನಿಂತಿದ್ದೆನು.

ಪೌಲನು ರೋಮಾಯವನ್ನು ಪ್ರವೇಶಿಸಿ, ಸುಮಾರು ಎರಡು ಸಾವಿರ ವರ್ಷಗಳು ದಾಟಿಹೋಗಿವೆ; ಆದರೆ ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡರೆ, "ಲೋಭ ಐಶ್ವರ್ಯವುಳ್ಳ ಹಾಗೂ ದುಷ್ಟ ಸ್ತ್ರೀಯು" ಜೀವಂತವಾಗಿ ಕಾಣಿಸುವಳಲ್ಲವೇ. ಪೌಲನ ದಿವಸಗಳಲ್ಲಿದ್ದ ಬಣ್ಣಮಯವಾದ ಜನಸಮೂಹವನ್ನು ಊಹಿಸಿಕೊಳ್ಳಿರಿ. ಶಕ್ತಿಶಾಲಿಗಳಾದ ಐಶ್ವರ್ಯವಂತರು ಸಾಮ್ರಾಜ್ಯವನ್ನು ತಮ್ಮ ಹತೋಟಿಯಲ್ಲಿಟ್ಟು ಕೊಂಡಿದ್ದರು, ಮೈಗಳ್ಳರಾದ ಬಡವರು ಪುಕ್ಕಟೆ ರೊಟ್ಟಿಗಾಗಿ ರೋಧಿಸುತ್ತಿದ್ದರು, ಜೀತದಾಳುಗಳಾದ ಗುಲಾಮರು ಅಗತ್ಯವಾದ ಆಹಾರ ಹಾಗೂ ಸೇವೆಯನ್ನು ನೀಡುತ್ತಿದ್ದರು. ಪೌಲನು ಮತ್ತು ಅವನ ಸಂಗಡಿಗರು ಈ ವಿಧವಾದ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸುವಾರ್ತೆಯನ್ನು ಸಾರಲು ಎಷ್ಟು ಕಷ್ಟಪಟ್ಟಿರಬಹುದು!

ಹೇಗೂ, ದೇವರಿಗೆ ಇದು ದೊಡ್ಡ ಸವಾಲಾಗಿರಲಿಲ್ಲ. ಯಾಕೆಂದರೆ ಅವನೇ ಮನುಷ್ಯರ ಕ್ರಿಯೆಗಳನ್ನು ಅರಿತವನಾಗಿರುವನು. ದೇವರ ಯೋಜನೆ ಹಾಗೂ ಉದ್ದೇಶದಲ್ಲಿ, ರಾಜಕೀಯದ

ಮುಖ್ಯ ಕೇಂದ್ರಗಳಿಂದ, ದೇವರ ರಾಜ್ಯದ ಶುಭಸಮಾಚಾರವು ಜನಸಂದಣಿಯಿರುವ ಪ್ರಪಂಚಕ್ಕೆ ಪ್ರಚಾರವಾಗುವ ಸಾಧ್ಯತೆಯಿತ್ತು. ಎಲ್ಲಾ ರಸ್ತೆಗಳು ರೋಮಾಯಕ್ಕೆ ಹೋಗುವದಾದರೆ, ಅವುಗಳು ರೋಮಾಯ*ದಿಂದ* ಇತರೆ - ಕಡೆಗೂ ಹೋದವು - "ಲೋಕದ ಕಟ್ಟಕಡೆಯವರೆಗೂ" ಹೋದವು (1:8).

ಅದ್ದರಿಂದ, "ತರುವಾಯ ರೋಮಾಪುರಕ್ಕೆ ಬಂದೆವು" ಎಂಬ ಮಾತು ಎಷ್ಟು ಗುರುತರ ವಾಗಿದೆಯಲ್ಲವೆ (28:14ಬಿ)! ಒಂದು ವರ್ಷದ ಹಿಂದೆ ಆರಂಭಗೊಂಡ ಪೌಲನ ಪ್ರಯಾಣವು, ಈಗ ಅಂತ್ಯಗೊಂಡು, ಮತ್ತು ದೇವರ ಸುವಾರ್ತೆಯ ಒಂದು ಹೊಸದಾದ ಯೋಜನೆಯು ಆರಂಭಗೊಂಡಿತು.

## ಪೌಲನು ಯೆಹೂದ್ಯರಿಗೆ ಸಾರಿದ ಸಂದೇಶದ ಅಂತಿಮ ಮಾತು (28:17-29)

### ನಿರ್ಭಂಧಗಳು ಅಡ್ಡಿಮಾಡಲಿಲ್ಲ (ವಚನಗಳು 17-23)

ಪೌಲನು, ರೋಮಾಪುರದವರಿಗೆ ಬರೆಯುವಾಗ, ಅವನು ಮೊದಲು "ಯೆಹೂದ್ಯರಿಗೆ ಸುವಾರ್ತೆಯನ್ನು" ತಲುಪಿಸುವದು ಪ್ರಥಮ ಆಧ್ಯತೆ ಎಂದು ತಿಳಿಸಿರುವನು, ಮತ್ತು ಎರಡನೇಯದಾಗಿ ಗ್ರೀಕರಿಗೆ (ರೋಮಾಪುರ 1:16ಸಿ). ಅವನು ಒಂದು ಹೊಸ ಪಟ್ಟಣಕ್ಕೆ ಬರುವಾಗ, ಮೊದಲು ಯೆಹೂದ್ಯರ ಸಭಾಮಂದಿರದಲ್ಲಿ ಉಪದೇಶ ಮಾಡುತ್ತಿದ್ದನು (ಅಪೊಸ್ತಲರ ಕೃತ್ಯಗಳು 17:1-3). ರೋಮಾಪುರದಲ್ಲಿ ಯೆಹೂದ್ಯರ ಸಂಖ್ಯೆಯು ಹೆಚ್ಚಾಗಿದ್ದು, ಸುಮಾರು ಹತ್ತು ಸಭಾಮಂದಿರಗಳು ಇದ್ದವು, ಆದರೆ ಪೌಲನು ಅವುಗಳಿಗೆ ಹೋಗುವ ಯಾವುದೇ ಆಯ್ಕೆಯನ್ನು ಮಾಡಲಿಲ್ಲ. ಆದಾಗ್ಯೂ ಅವನು ಅಲ್ಲಿಗೆ ಹೋಗದಿದ್ದರೂ, ಅವರನ್ನು ತನ್ನ ಬಳಿಗೆ ಆಹ್ವಾನಿಸಿದನು.

ಕೆಲವು ದಿನಗಳ ವಿಶ್ರಾಂತಿ ಪಡೆದ ನಂತರ (ಬಹುಶಃ ಜನರ ಪರಿಚಯಗಳನ್ನು ಮಾಡಿಕೊಂಡಿರಬಹುದು), "ಪೌಲನು ಯೆಹೂದ್ಯರಲ್ಲಿ ಪ್ರಮುಖರನ್ನು ತನ್ನ ಬಳಿಗೆಕರೆಯಿಸಿದನು" (28:17ಎ): ಸಭಾಮಂದಿರದ ಹಿರಿಯರನ್ನು ಸದ್ದುಕಾಯರನ್ನು ಹಾಗೂ ಯೆಹೂದ್ಯ ಕುಟುಂಬಗಳ ಪ್ರಮುಖ ನಾಯಕರನ್ನೂ ಕರೆಯಿಸಿದನು. ಒಂದು ವೇಳೆ ಅವರೆಲ್ಲರೂ ಯೆರೂಸಲೇಮಿನ ಯೆಹೂದ್ಯರಲ್ಲಿ ಉಂಟಾಗಿದ್ದ ಅಸೂಯೆಯ ಗುಣಗಳನ್ನು ಹೊಂದಿದ್ದರೂ ಅಥವಾ ಹೊಂದದೆ ಇದ್ದರೂ ಎಂಬುದನ್ನು ತಿಳಿಯ ಬಯಸಿರಬಹುದು. ಪೌಲನು ಅವರಲ್ಲಿ ಭರವಸೆಯನ್ನು ನೀಡಿದನು. ಬಹಳ ಪ್ರಮುಖವಾಗಿ, ಅವರಲ್ಲಿ ಕೆಲವರನ್ನಾದರೂ ಯೇಸುವಿಗಾಗಿ ಗೆದ್ದು ಕೊಳ್ಳಬೇಕೆಂದು ಬಯಸಿದನು (ರೋಮಾಪುರ 9:1-5; 10:1).

> ಅವರು ಕೂಡಿದ ಮೇಲೆ ಅವನು ಅವರಿಗೆ - ಸಹೋದರರೇ, ನಾನು ನಮ್ಮ ಜನರಿಗೂ ನಮ್ಮ ಪಿತೃಗಳ[23] ಆಚಾರಗಳಿಗೂ ವಿರುದ್ಧವಾಗಿ ಏನೂ ಮಾಡದವನಾದರೂ ಯೆರೂಸಲೇಮಿನಿಂದ ರೋಮಾಯರ ಕೈಗೆ ಸೆರೆಯವನಾಗಿ ಒಪ್ಪಿಸಲ್ಪಟ್ಟೆನು. ಅವರು ನನ್ನನ್ನು ವಿಚಾರಣೆಮಾಡಿ ನನ್ನಲ್ಲಿ ಮರಣದಂಡನೆಗೆ ಕಾರಣವೇನೂ ಇಲ್ಲದ್ದರಿಂದ ನನ್ನನ್ನು ಬಿಡಿಸಬೇಕೆಂದಿದ್ದರು. ಅದಕ್ಕೆ ಯೆಹೂದ್ಯರು ಅಡ್ಡ ಮಾತಾಡಿದ್ದರಿಂದ ನಾನು ಚಕ್ರವರ್ತಿಯ ಎದುರಿನಲ್ಲಿ ಹೇಳಿಕೊಳ್ಳುತ್ತೇನೆಂದು ಹೇಳಬೇಕಾಗಿ ಬಂತು. ನನ್ನ ಸ್ವದೇಶದವರ ಮೇಲೆ ದೋಷಾರೋಪಣೆ ಮಾಡಬೇಕೆಂಬ ಅಭಿಪ್ರಾಯದಿಂದ ಅದನ್ನು ಹೇಳಲಿಲ್ಲ. ಈ ಕಾರಣದಿಂದ ನಾನು ನಿಮ್ಮನ್ನು ಕಂಡು ಮಾತಾಡಬೇಕೆಂದು ಕರೆಯಿಸಿದೆನು.[24] ಇಸ್ರಾಯೇಲ್ ಜನರ ನಿರೀಕ್ಷೆಯ ನಿಮಿತ್ತವಾಗಿ ಈ ಬೇಡಿಯಿಂದ ಕಟ್ಟಲ್ಪಟ್ಟಿದ್ದೇನೆ ಎಂದು ಹೇಳಿದನು[25] (ಅಪೊಸ್ತಲರ ಕೃತ್ಯಗಳು 28:17ಬಿ - 20).

ಪೌಲನು ಸತ್ಯದ ಕುರಿತು ಮೂರು ಹೇಳಿಕೆಯನ್ನು ನೀಡಿದನು: (1) ಅವನು ಯೆಹೂದ್ಯರಿಗೆ ವಿರೋಧವಾದದ್ದನ್ನು ಮಾಡಲಿಲ್ಲ; (2) ರೋಮಾಯರು ಅವನಿಗೆ ವಿರೋಧವಾಗಿ ಏನನ್ನೂ ಹೊಂದಿರಲಿಲ್ಲ; (3) ಯೆಹೂದ್ಯರು ಅವನಿಗೆ ವಿರೋಧವಾಗಿರಲಿಲ್ಲ.

ಈ ಹಿಂದಿನ ನಮ್ಮ ಬೋಧನಾ ಸರಣಿಯಲ್ಲಿ, ಕಥೆಯನ್ನು ಸ್ಪಷ್ಟವಾಗಿ ಹೇಳುವ ಎರಡು ಉದಾಹರಣೆಗಳನ್ನು ನೀಡಿದ್ದವು - 23:26-30 ಮತ್ತು 25:14-21. ಇತರರ ಕುರಿತಾಗಿ ಪೌಲನು ಸ್ಪಷ್ಟತೆಯನ್ನು ನೀಡುವ ಕುರಿತು ಪೌಲನು ಹೇಳಿದ ಕಥೆಯ ನಿದರ್ಶನವನ್ನು ನೋಡುತ್ತೇವೆ (ಒಳ್ಳೆ ಸಾಕ್ಷಿಗಾಗಿ): (1) ತನ್ನ ಕೇಳುಗರೊಂದಿಗೆ ತನ್ನನ್ನು ತೋರ್ಪಡಿಸಿಕೊಂಡನು. ಅವನು ಅವರನ್ನು ಕುರಿತು "ಸಹೋದರರೇ" ನನ್ನ ಜನರೇ, ನಮ್ಮ ತಂದೆಯರೇ ಎಂದು ಕರೆದನು. (2) ಅವನನ್ನು ಅವರುಗಳು ಸರಿಯಾಗಿ ನಡೆಸಿಕೊಳ್ಳಲಿಲ್ಲವೆಂಬ ಆಲೋಚನೆಯನ್ನು ಹಗುರ ವಾಗಿ ಪರಿಗಣಿಸಿದನು. ಕೊಲೆ ಪಾತಕನ ಜನರಿಂದ ತಪ್ಪಿಸಿಕೊಂಡವನಾಗಿ, ರೋಮಾಯರ ಕೈಗೆ ಒಪ್ಪಿಸಲ್ಪಟ್ಟನು. (3) ತನ್ನ ವಿರೋಧಿಗಳ ಹಾಗೂ ಕೇಳುಗರ ನಡುವಿನ ವ್ಯತ್ಯಾಸವನ್ನು ತೋರಿಸಿದನು. ನಿಂದನೆಯ ಕುರಿತು ಮಾತನಾಡುವಾಗ, "ಯೆಹೂದ್ಯರಾದ ನೀವು ಎನ್ನದೆ ಯೆಹೂದ್ಯರು" ಎಂದು ವ್ಯಾಖ್ಯಾನಿಸಿದನು. (4) ಅವನ ನಿರ್ಮಲ ಚಿತ್ತವನ್ನು ತನ್ನ ಕೇಳುಗರಿಗೆ ವಿವರಿಸಿದನು. ಅವನು ಯಾರಮೇಲೂ ಅರೋಪವನ್ನು ಮಾಡಲಿಲ್ಲ. "ಇಸ್ರಾಯೇಲ್ಯರ ನಿರೀಕ್ಷೆ ಗಾಗಿ" ಹಿಂಸೆಯನ್ನು ಯೆಹೂದ್ಯರು ಅನುಭವಿಸಬೇಕೆಂದು ಯೆಹೂದ್ಯರು ಅರಿತ್ತಿದ್ದರು, ಈಗ ಪೌಲನು ತನ್ನನ್ನು ತಾನೇ ಅವರೊಂದಿಗೆ ಹೋಲಿಸಿ ಕೊಂಡು ಎಲ್ಲಕ್ಕೂ ಅಂತ್ಯಹೇಳಿದನು.

ಯೆಹೂದ್ಯ ಜನರ ವಿರೋಧವಾಗಿ ಪಿರ್ಯಾದನ್ನು ಪೌಲನು ಸಲ್ಲಿಸುವನು ಎಂಬ ವಿಚಾರದಲ್ಲಿ ಯೆಹೂದ್ಯರು ಆಸಕ್ತರಾಗಿದ್ದರು. ಒಂದು ದಶಮಾನದ ಹಿಂದೆ ಜರುಗಿದ ಯೆಹೂದ್ಯರ ಮತ್ತು ಕ್ರೈಸ್ತರ ನಡುವಿನ ಸಂಘರ್ಷದ ನಿಮಿತ್ತ ಚಕ್ರವರ್ತಿಯಾದ ಕ್ಲೌದ್ಯನು ಸಕಲ ಯೆಹೂದ್ಯರನ್ನು ರೋಮಾಪುರದಿಂದ ಹೊರ ಹಾಕಿದ್ದನು (ಕ್ರೈಸ್ತರನ್ನೂ ಸಹ) (18:2). ಯೆಹೂದ್ಯರಿಗೆ ಮತ್ತೊಮ್ಮೆ ಈ ವಿಧದ ಸಂಘರ್ಷವಾಗಬಾರದೆಂದು ಯೆಹೂದ್ಯರು ಬಯಸಿದ್ದರು.

ಅವರ ಪ್ರತಿವಾದವು ಪೌಲನಿಗೆ, ಎಚ್ಚರಿಕೆಯೂ ಹಾಗೂ ನ್ಯಾಯಯುತವೂ ಆಗಿತ್ತು. ಅವರು ಆರಂಭಿಸಿ, "ನಿನ್ನ ವಿಷಯವಾಗಿ ನಮಗೆ ಯುದಾಯದಿಂದ ಕಾಗದಗಳು ಬರಲಿಲ್ಲ, ಸಹೋದರರಲ್ಲಿ ಒಬ್ಬರೂ ಬಂದು ನಿನ್ನ ವಿಷಯವಾಗಿ ಕೆಟ್ಟದ್ದನ್ನು ತಿಳಿಸಲಿಲ್ಲ, ಹಾಗೂ ಮಾತನಾಡಲೂ ಇಲ್ಲ" (28:21). ಪೌಲನ ಕುರಿತ ಯಾವುದೇ ವರದಿಯನ್ನು ಯೆರೂಸಲೇಮಿನ ಯೆಹೂದ್ಯರು, ರೋಮಾಯಕ್ಕೆ ರವಾನೆ ಮಾಡಲಿಲ್ಲ ಎಂಬದು ಆಶ್ಚರ್ಯವೇ.[26] ನಮಗೆ ದೊರೆತ ಮಾಹಿತಿ ಪ್ರಕಾರ ಯೆಹೂದ್ಯರು ಇಂಥ ಕಾರ್ಯವನ್ನು ಮಾಡಲಿಲ್ಲ. ಪ್ರಾಯಶಃ ಅದಕ್ಕೆ ಅವರು ಗಮನ ಹರಿಸಲಿಲ್ಲ, ಮತ್ತು ಪೌಲನ ಕುರಿತು ಅವರು ಯಾವ ಅರೋಪವನ್ನು ಮಾಡಲಿಲ್ಲ, ಮತ್ತು ಅವರು ಅವನ ಮೇಲೆ ಮಾಡಿದ ಅಪವಾದದ ನಿಮಿತ್ತ, ನೂರಾರು ಮೈಲುಗಳ ದೂರದಲ್ಲಿ ಅವನಿಗೆ ಸೆರೆವಾಸವಾಯಿತು ಎಂದು ತಿಳಿದು, ಅವನು ಇನ್ನು ಮುಂದೆ ಅವರ ಭಾವನೆಗಳಿಗೆ ಧಕ್ಕೆ ಉಂಟು ಮಾಡುವದಿಲ್ಲ ಎಂದು ತಿಳಿದು ಸುಮ್ಮನಾಗಿರಬಹುದು. ಮುಂದೆ ಪೌಲನು ಅವರನ್ನು ತೊರೆದು ಹೋದ ನಂತರ ಪಾಲಿಸ್ತೇನಕ್ಕೆ ವಿರುದ್ಧವಾಗಿ ರೋಮಾಯರು ಮಾಡುತ್ತಿದ್ದ ಕಠಿಣವಾದ ಆಡಳಿತ ಬಗ್ಗೆ ಅವರು ಹೆಚ್ಚು ಗಮನ ನೀಡಿರಬಹುದು.

ಯೆರೂಸಲೇಮಿನ ಯೆಹೂದ್ಯರು ಅಪೊಸ್ತಲನ ಕುರಿತು ಕೆಟ್ಟ ವರದಿಯನ್ನು ಪಡೆಯದೆ ಇದ್ದರೂ, ಅವನು ಯಾವ ಕಾರಣಕ್ಕಾಗಿ ತ್ವರೆಪಡುತ್ತಿದ್ದನೋ, ಅವಿಚಾರವಾಗಿ ನಕಾರಾತ್ಮಕ ವಾಗಿ ಕೇಳಲ್ಪಟ್ಟರು. ಇತರರ ಹಾಗೆ, ಅವರೂ ಸಹ ಈ ವಿಷಯದ ಕುರಿತು ಪರೀಶೀಲನೆ ಮಾಡಲು ಮುಂದಾದರು. ಆದ್ದರಿಂದ ಅವರು ಪೌಲನಿಗೆ, "ಆದರೆ ನಿನ್ನ ಅಭಿಪ್ರಾಯವನ್ನು ನಿನ್ನಿಂದಲೇ ಕೇಳುವದು ನಮಗೆ ಯುಕ್ತವೆಂದು ತೋರುತ್ತದೆ.[27] ಆ ಮತದ ವಿಷಯದಲ್ಲಿ ಜನರು ಎಲ್ಲೆಲ್ಲಿಯೂ ವಿರುದ್ಧವಾಗಿ ಮಾತಾಡುರೆಂಬದೊಂದೇ ನಮಗೆ ಗೊತ್ತದೆ ಅಂದರು"[28]

(ವಚನ 22). ನಂತರ ಅವರು ಒಂದು ದಿವಸವನ್ನು ಗೊತ್ತು ಮಾಡಿ ಹೊರಟು ಹೋದರು (ವಚನ 23ಎ).

**ತಿರಸ್ಕಾರವು ಅವರಿಗೆ ಅಡ್ಡಿಪಡಿಸಲಿಲ್ಲ (ವಚನಗಳು 23-29)**

ಅವರು ಅವನಿಗೆ ಒಂದು ದಿವಸವನ್ನು ಗೊತ್ತು ಮಾಡಲು "ಬಹುಮಂದಿ ಅವನ ಬಿಡಾರದಲ್ಲಿ[29] ಅವನ ಬಳಿಗೆ ಬಂದರು" (ವಚನ 23ಬಿ). ಅಲ್ಲಿ ಅವನಿಗೆ ಬಹಳ ಆನಂದವಾಯಿತು. ಅವನು ಮರು ಅಧ್ಯಯನವನ್ನು ಮಾಡುವ ಕುರಿತು ಹೇಳುವನೆಂದು ತಿಳಿದರು, ಆದರೆ ಅವನು ಅದನ್ನು ಸುವಾರ್ತಾ ಕೂಟವನ್ನಾಗಿ ಮಾಡಿದನು. ಯೇಸುವಿನ ವಾಗ್ದಾನದಂತೆ, "ರೋಮಾಯದಲ್ಲಿ ಸಾಕ್ಷಿಯ ಅವಕಾಶವನ್ನು ಪಡೆದನು" (23:11)!

ಪೌಲನು *ನಿರೀಕ್ಷೆಯ ಸಂದೇಶವನ್ನು* ಆರಂಭಿಸಿದನು - ಅವನು ದೇವರ ರಾಜ್ಯದ ಹಾಗೂ ಅದರ ಅರಸನ ಕುರಿತು ಉಪದೇಶಮಾಡಿದನು. "ಅವನು ಬೆಳಗಿನಿಂದ ಸಾಯಂಕಾಲದ ವರೆಗೂ ದೇವರ ರಾಜ್ಯವನ್ನು[30] ಗ್ರಂಥಗಳನ್ನೂ ಆಧಾರಮಾಡಿಕೊಂಡು ಯೇಸುವಿನ ವಿಷಯದಲ್ಲಿ ಅವರನ್ನು ಒಡಂಬಡಿಸುತ್ತಾ ಇದ್ದನು"[31] (28:23ಸಿ). ಅವನು "ಬೆಳಗಿನಿಂದ ಸಾಯಂಕಾಲದವರೆಗೆ" (ವಚನ 23ಡಿ) ಇದನ್ನು ಮಾಡಿದನು.[32]

ಯಥಾಪ್ರಕಾರ, ಕೆಲವರು ಅವನ ಸಂದೇಶವನ್ನು ಸ್ವೀಕರಿಸಿದರೆ, ಕೆಲವರು ಸ್ವೀಕರಿಸಲಿಲ್ಲ: "ಅವನು ಹೇಳಿದ ಮಾತುಗಳಿಗೆ ಕೆಲವರು ಒಪ್ಪಿಕೊಂಡರು; ಕೆಲವರು ನಂಬದೆ ಹೋದರು" (ವಚನ 24). ನಂಬುವವರಿಗೂ ನಂಬದೆ ಇರುವವರ ನಡುವೆ ವಾಗ್ವಾದ ಉಂಟಾದಾಗ: "ಅವರಲ್ಲಿ ಐಕಮತ್ಯ ಇಲ್ಲದಾಯಿತು" (ವಚನ 25ಎ) "ಅವರಲ್ಲಿ ಅತಿಯಾದ ವಾಗ್ವಾದ ಉಂಟಾಯಿತು" (ವಚನ 29).

ದಿನದ ಅಂತ್ಯದಲ್ಲಿ, ಪೌಲನು *ನ್ಯಾಯ ತೀರ್ಪಿನ* ಕುರಿತು, ಯೆಶಾಯ ಪ್ರವಾದನೆ ಗ್ರಂಥದಿಂದ ಮಾತನಾಡಿದನು:

> ಅವರಲ್ಲಿ ಐಕಮತ್ಯವಿಲ್ಲದೆ ಇರುವಾಗ ಪೌಲನು ಅವರಿಗೆ - ಪವಿತ್ರಾತ್ಮನು ಪ್ರವಾದಿಯಾದ[33] ಯೆಶಾಯನ ಬಾಯಿಂದ ನಿಮ್ಮ ಪಿತೃಗಳಿಗೆ[34] ವಿಹಿತವಾಗಿ ಹೇಳಿದ್ದೇನಂದರೆ - ನೀನು ಈ ಜನರ ಬಳಿಗೆ ಹೋಗಿ ಅವರಿಗೆ - ನೀವು ಕಿವಿಯಿದ್ದು ಕೇಳಿದರೂ ತಿಳುಕೊಳ್ಳುವದೇ ಇಲ್ಲ; ಕಣ್ಣಿದ್ದು ನೋಡಿದರೂ ಕಾಣುವದೇ ಇಲ್ಲ ಎಂಬದಾಗಿ ಹೇಳು. ಯಾಕಂದರೆ ಈ ಜನರ ಹೃದಯವು ಕೊಬ್ಬಿತು; ಇವರ ಕಿವಿ ಮಂದವಾಯಿತು; ಇವರು ಕಣ್ಣು ಮುಚ್ಚಿಕೊಂಡಿದ್ದಾರೆ; ತಾವು ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ತಿಳಿದು ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದಬಾರದೆಂದು ಮಾಡಿಕೊಂಡಿದ್ದಾರೆ ಎಂಬದೇ (ವಚನಗಳು 25ಸಿ-27).

(ಯೆಶಾಯ 6:9, 10)ರಲ್ಲಿ, ದೇವರ ವಾಕ್ಯದಿಂದ ಹಿಂಜರಿದು ಹೋಗುವದರಿಂದ ಉಂಟಾಗುವ ಪರಿಣಾಮದ ಕುರಿತು ತಿಳಿಸಲಾಗಿದೆ. ಒಬ್ಬನು ದೇವರ ವಾಕ್ಯವನ್ನು ಆಲಿಸುವದರಲ್ಲಿ ಕೇಳದಂತೆ ಮುಂದುವರಿದರೆ, ಒಂದು ಸಮಯ ಬರುತ್ತದೆ ಆಗ ಅವನು ಒಪ್ಪಿಕೊಳ್ಳಲಾರದಂಥ ಕಠಿಣವಾದ ಸಮಯವನ್ನು ಎದುರಿಸಬೇಕಾಗುತ್ತದೆ.

ಯೆಶಾಯನ ದಿವಸಗಳಲ್ಲಿ ಜೀವಿಸಿದ್ದ ಕಠಿಣ ಹೃದಯಿಗಳಾದ ಇಸ್ರಾಯೇಲ್ಯರಿಗಾಗಿ ಈ ವಾಕ್ಯಗಳನ್ನು ಬರೆದಿದ್ದನು. ತರುವಾಯ ಯೇಸು ಸಹ ತನ್ನ ದಿನಗಳಲ್ಲಿ ಯೆಹೂದ್ಯರಿಗೆ ಈ ವಾಕ್ಯವನ್ನು ಅಳವಡಿಸಿದ್ದನು, ಯಾಕಂದರೆ ಅವರೂ ಸಹ ಆತನ ವಾಕ್ಯಗಳನ್ನು ತಿರಸ್ಕರಿಸಿದ್ದರು (ಮತ್ತಾಯ 13:14, 15; ಮಾರ್ಕ 4:12; ಲೂಕ 8:10; ನೋಡಿರಿ ಯೋಹಾನ 12:40). ನಂತರದಲ್ಲಿ ಮೆಸ್ಸಿಯನನ್ನು ತಿರಸ್ಕರಿಸಿದ ಯೆಹೂದ್ಯರಿಗೆ ಪೌಲನು ಈ ವಾಕ್ಯಗಳನ್ನು ತಿಳಿಸಿದ್ದನು (ರೋಮಾಪುರ 11:8). ಅಪೊಸ್ತಲರ ಕೃತ್ಯಗಳು 28:26,

27ರ ವಾಕ್ಯವನ್ನು ಅಂತಿಮವಾಗಿ, ಹಾಗೂ ನಾಲ್ಕನೆಯ ಸಾರಿ ಪ್ರಯೋಗ ಮಾಡಲಾಗಿದೆ;[35] ಕಠಿಣವಾದ ಯೆಹೂದ್ಯರ ಹೃದಯಗಳೇ ಮುಖ್ಯ ವಿಷಯಾಯಿತು.

ಈ ಹಿಂದೆ ಅಪೊಸ್ತಲರ ಕೃತ್ಯಗಳು 21-25 ಅಧ್ಯಾಯಗಳಲ್ಲಿ ಪೌಲನ ಸುವಾರ್ತೆಯನ್ನು ಯೆಹೂದ್ಯರು ತಿರಸ್ಕರಿಸಿದಾಗ ಯೆರೂಸಲೇಮಿನ ಅಂತ್ಯದ ಆರಂಭವು ಉಂಟಾಗಿತ್ತು, ಅದು ಕ್ರಿ.ಶ. 70ರಲ್ಲಿ ರೋಮಾಯದಿಂದ ನಾಶವಾಯಿತು. ಕೆಲವರ ಅಭಿಪ್ರಾಯದಂತೆ, "ಯೆಹೂದ್ಯ ಜನಾಂಗವನ್ನು ತಿರಸ್ಕರಿಸಿದ ಗುರುತನ್ನು ಅಧ್ಯಾಯ 28ರಲ್ಲಿ ಗಮನಿಸುತ್ತೇವೆ[36] - ಅವರು ತಮ್ಮನ್ನು ತಾವೇ ಸರಿಪಡಿಸಿಕೊಳ್ಳುವದಕ್ಕೆ"[37] ಯೋಗ್ಯವಾದ ಸಮಯವು ಇದಾಗಿತ್ತು.[38]

ಯೆಶಾಯದ ಗ್ರಂಥದಿಂದ ಉಲ್ಲೇಖಿಸಿದ ನಂತರ, "ಪೌಲನು, ಆದ ಕಾರಣ ದೇವರಿಂದಾದ ಈ ರಕ್ಷಣೆಯು ಅನ್ಯ ಜನರಿಗೆ ಹೇಳಿಕಳುಹಿಸಲ್ಪಟ್ಟಿದೆ ಎಂದು ನಿಮಗೆ ಚೆನ್ನಾಗಿ ತಿಳಿದಿರಲಿ; ಅವರಾದರೂ ಕೇಳುವರು ಎಂದು ಹೇಳಿದನು" (ವಚನ 28). ಯೆಹೂದ್ಯರಿಗಿಂತಲೂ, ಅನ್ಯರು ದೇವರ ವಾಕ್ಯವನ್ನು ಆಸಕ್ತಿಯಿಂದ ಸ್ವೀಕರಿಸುವರು ಎಂದು ಪೌಲನು ಹೇಳುತ್ತಿರಬಹುದು. "*ರಕ್ಷಣಾ ಸುವಾರ್ತೆಯನ್ನು ಅವರು ಸ್ವೀಕರಿಸಿದ ವಿಚಾರವನ್ನು* ಇತಿಹಾಸವು ತಿಳಿಸುತ್ತದೆ."[39] ಅಥವಾ ಯೆಹೂದ್ಯರಿಗೆ ಮೊದಲು ಸಾರಲ್ಪಡಬೇಕೆಂಬ ವಿಚಾರವನ್ನು ಪೌಲನು ಒತ್ತಿ ಹೇ ಳುತ್ತಿರುವದಿಲ್ಲ.[40] ಇಲ್ಲಿ "ಯೆಹೂದ್ಯರಿಗೆ ಮೊದಲು" ಎಂದು ಅವನ ಪತ್ರಿಕೆಗಳಲ್ಲಿ ಹೇಳುತ್ತಿ ರುವದಿಲ್ಲ ಅಥವಾ ಅವನ ನಂತರದ ಪತ್ರಿಕೆಗಳಲ್ಲೂ ಹೇಳಿರುವದಿಲ್ಲ (1 ಮತ್ತು 2 ತಿಮೊಥೆ ಮತ್ತು ತೀತ) ಹವಾರ್ಡ್ ಮಾರ್ಷಲ್‌ರವರು, "ಸಾಮಾನ್ಯವಾದ ಮಾದರಿಯನ್ನು ಸಭೆಯು ಹಿಂಬಾಲಿಸಬೇಕು ಎಂದು ಲೂಕನು ತಿಳಿಸಿರುವನು ಎಂದಿರುವರು."[41] ಈ ದಿನಗಳಲ್ಲಿ, ನಾವುಗಳು ಹೊಸ ಸಮುದಾಯದ ಬಳಿಗೆ ಹೋಗುವಾಗ, ಅವರಿಗೆ ಸಾರುವ ಮೊದಲು ಯೆಹೂದ್ಯರಿಗೆ ಮೊದಲು ಸಾರಬೇಕು ಎಂಬ ಹಂಗು ಇರುವದಿಲ್ಲ.

ವಚನ 28ರಲ್ಲಿ ಪೌಲನು ತಿಳಿಸಿರುವ ಅನ್ಯರ ಕುರಿತ ವಾದವು ಅಂತ್ಯಗೊಂಡಿತು. ಅವನು ಈ ಮಾತನ್ನು ಹೇಳಿದ ಮೇಲೆ ಅವರು ಹೊರಟುಹೋದರು (ವಚನ 25ಬಿ). ವೆಸ್ಟರ್ನ್ ಟೆಕ್ಸ್‌ನ ಅನುವಾದವನ್ನು ಕೆಲವರು ಮಾಡಿರುವರು: "ಅವನು ಈ ಮಾತುಗಳನ್ನು ಆಡಿದ ನಂತರ, ಯೆಹೂದ್ಯರು ತಮ್ಮ ತಮ್ಮಲ್ಲಿಯೇ ವಾಗ್ವಾದ ಮಾಡಿಕೊಂಡವರಾಗಿ, ಹೊರಟು ಹೋದರು."

ಇತರೆ ಪಟ್ಟಣಗಳಲ್ಲಿ ನಡೆದಂತೆ ಯೆಹೂದ್ಯರು ಪೌಲನನ್ನು ಹಾಗೂ ಅವನ ಸಂದೇಶವನ್ನು ನಿರಾಕರಿಸಿದರು. ಈ ಸಮಯದಲ್ಲಿ, ಹೇಗೂ, ಯೆಹೂದ್ಯರು ಅವನನ್ನು ಪಟ್ಟಣದಿಂದಹೊರಹಾಕುವದಾಗಲಿ ಅಥವಾ ಅವನನ್ನು ಕಲ್ಲೆಸೆದು ಕೊಲ್ಲುವದಾಗಲಿ ಮಾಡಲಿಲ್ಲ (13:50; 14:5, 19), ಯಾಕಂದರೆ ಅವನನ್ನು ರೋಮಾ ಸರ್ಕಾರದವರು ಕಾಪಾಡಿದ್ದರು! ದೇವರು ಅದ್ಭುತವಾದ ರೀತಿಯಲ್ಲಿ ಕಾರ್ಯಮಾಡುವನು.

## ಸುವಾರ್ತೆಯ ಕುರಿತ ಅಂತಿಮವಾದ ಮಾತುಗಳು (28:30, 31)

### ಬೇಡಿಗಳು ಅಡ್ಡಿಪಡಿಸಲಿಲ್ಲ (ವಚನ 30)

ಪೌಲನು ರೋಮಾಯದಲ್ಲಿ ವಾಸಿಸಿದ ಕುರಿತು ಲೂಕನು ದಾಖಲಿಸಿ, "ತರುವಾಯ ಅವನು ತಾನೇ ಮಾಡಿಕೊಂಡ ಬಾಡಿಗೆಯ ಮನೆಯಲ್ಲಿ ಪೂರ ಎರಡು ವರ್ಷ ಇದ್ದನು" (ವಚನ 30ಎ). ಪೌಲನ ಮೇಲಿನ ಆರೋಪಗಳ ಕುರಿತು ಇಷ್ಟು ಸಮಯ ಏಕೆ ಆಯಿತು ಎಂಬುದಕ್ಕೆ ಕಾರಣ ತಿಳಿದಿರುವುದಿಲ್ಲ ಪ್ರಾಯಶಃ (ಈ ಹಿಂದೆ ಗಮನಿಸಿದಂತೆ) ಅವನ ಮೇಲೆ ಆರೋಪ ಮಾಡಿದವರು ಈ ವಿಚಾರವನ್ನು ಮುಂದುವರಿಸದೆ ಇರಲು ಬಹುದು. ಬಹುಶಃ ನ್ಯಾಯಾಲಯವು ಬಹುದೂರ ಇರಲೂ ಬಹುದು ಕಾರಣಗಳೇನೇ ಇರಲಿ, ಆ ಸಮಯದಲ್ಲಿ ಪೌಲನು "ತಾನೇ ಮಾಡಿಕೊಂಡ ಬಾಡಿಗೆಯ ಮನೆಯಲ್ಲಿ ವಾಸಿಸಲು ಅನುಮತಿ

ಹೊಂದಿದ್ದನು"[42] - ಒಂದು ವೇಳೆ ರೋಮಾಯದ ಅಥವಾ ಇತರ ಕ್ರೈಸ್ತರು ಆ ಮನೆಯ ಬಾಡಿಗೆಯನ್ನು ನೀಡಿರಬಹುದು.[43]

ಪೌಲನು ಕೆಲವು ವಿಶೇಷ ಅನುಕೂಲತೆಗಳನ್ನು ಹೊಂದಿದ್ದರು (ವಚನ 30ಬಿ). ಆ ಮನೆಯಲ್ಲಿಯೇ ಅವನು ಉಳಿದಿರಬೇಕಿತ್ತು, ರಾತ್ರಿ ಹಗಲು ರೋಮಾಯದ ಒಬ್ಬ ಸಿಪಾಯಿಯ ಸಂಗಡ ಬೇಡಿಗಳಿಂದ ಬಂಧಿಸಲ್ಪಟ್ಟಿದ್ದ (ವಚನಗಳು 16, 20; ಎಫೆಸ 6:20). ದಿನಗಳು ವಾರಗಳಾದಾಗ, ವಾರಗಳು ತಿಂಗಳುಗಳಾದಾಗ, ಮತ್ತು ತಿಂಗಳುಗಳು ವರ್ಷಗಳಾದಾಗ, ಅವನು ರಸ್ತೆಗಳಲ್ಲಿ ಓಡಾಡುತ್ತ ವೇದಿಕೆಗಳ ಮೇಲೆ ಪ್ರಸಂಗ ಮಾಡಲು ಆಲಿಸಬಹುದು. ಪೌಲನನ್ನು ದೇವರು ರೋಮಾಯಕ್ಕೆ ಕರತಂದು ಸೆರೆಬಂಧಿಯಾಗಿ ಏಕೆ ಇಟ್ಟನೆಂದು ಅವನಿಗೆ ಆಶ್ಚರ್ಯವಾಗಿರಬಹುದು. ದೇವರ ಮನಸ್ಸನ್ನು ಗ್ರಹಿಸಲು ನಾವು ಅಶಕ್ತರೇ, ಆದರೆ ಉದ್ದೇಶಗಳ ಕೆಲವು ಸಾಧ್ಯತೆಗಳನ್ನು ಪರಿಶೀಲಿಸೋಣ:

(1) ಪೌಲನು ಬಂಧಿಸಲ್ಪಡದಿದ್ದರೆ ಪ್ರಾಯಶಃ ತನ್ನ ಜೀವಮಾನ ಕಾಲವನ್ನು ರೋಮಾಯದಲ್ಲಿ ಕಳೆಯುವ ಸಾಧ್ಯತೆ ಇತ್ತು. ಅಲ್ಲಿ ಈಗಾಗಲೇ ಸಭೆಯು ಸ್ಥಾಪನೆಗೊಂಡಿತ್ತು, ಮತ್ತು ಪೌಲನು "ಮತ್ತೊಬ್ಬರು ಹಾಕಿದ ಅಸ್ಥಿವಾರದ ಮೇಲೆ ಕಟ್ಟಬಾರದೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದನು" (ರೋಮಾಪುರ 15:20ಸಿ). ಅವನು ರೋಮಾಯವನ್ನು ಸಂಧಿಸುವ ತಾತ್ಕಾಲಿಕ ಯೋಜನೆಯನ್ನು ಮಾಡಿಕೊಂಡು ನಂತರ ಸ್ಪೇನ್ ದೇಶಕ್ಕೆ ಮತ್ತು ಇತರೆ ಸ್ಥಳಗಳಿಗೆ ಹೋಗುವವನಿದ್ದನು (ರೋಮಾಪುರ 15:24).

(2) ಅವನು ಬಂಧಿಸಲ್ಪಟ್ಟಕಾರಣದಿಂದ ರೋಮಾಪುರ ಚಕ್ರವರ್ತಿಯ ಅರಮನೆಗೆ ಸುವಾರ್ತೆಯನ್ನು ಸಾರಲು ಸಾಧ್ಯವಾಯಿತು. ಪೌಲನು ಫಿಲಿಪ್ಪಿಯವರಿಗೆ ಬರೆಯುವಾಗ: "ನನ್ನ ಬೇಡಿಗಳು ಕ್ರಿಸ್ತನ ನಿಮಿತ್ತವೇ ಎಂದು ಅರಮನೆಯ ಪಹರೆಯವರೆಲ್ಲರಿಗೂ ಮಿಕ್ಕಾದವರೆಲ್ಲರಿಗೂ ಪ್ರಸಿದ್ಧವಾಯಿತು ಅಂದನು ..." (ಫಿಲಿಪ್ಪಿ 1:13). "ಅರಮನೆಯ ಪರಹೆಯವರನ್ನು ಅತ್ಯಂತ ಸೂಕ್ಷ್ಮ ಖೈದಿಗಳನ್ನು ಕಾಯುವದಕ್ಕೂ ಮತ್ತು ಅರಸುಗಳ ತೀರ್ಪಿಗಾಗಿ ನೇಮಕವಾಗಿದ ಖೈದಿಗಳಾಗಿ ಮೀಸಲಿಟ್ಟಿದ್ದು"[44] ಪ್ರತಿ ನಾಲ್ಕರಿಂದ ಆರು ತಾಸುಗಳವರೆಗೆ ಪೌಲನೊಂದಿಗೆ ಕಟ್ಟಲ್ಪಟ್ಟಿದ್ದ ಸಿಪಾಯಿಯನ್ನು ಬದಲಾಯಿಸುತ್ತಿದ್ದರು. ಪ್ರತಿ 24 ತಾಸುಗಳ ಅವಧಿಯಲ್ಲಿ ನೂರಾರು ಸಿಪಾಯಿಗಳು ಪೌಲನು ಸುವಾರ್ತೆಯನ್ನು ತಲುಪಿಸಿದ್ದನು. ಪೌಲನು ಇತರರಿಗೆ ಉಪದೇಶಿಸುವಾಗ, ಈ ಸಿಪಾಯಿಗಳು ಸುವಾರ್ತೆಯನ್ನು ಕೇಳಲೇಬೇಕಾದ ಸಂದರ್ಭ ಉಂಟಾಗಿತ್ತು. ತರುವಾಯ ಪೌಲ ಮತ್ತು ಪಹರೆಯವರು ಮಾತ್ರ ಇರುವಾಗ, ಅವರು ಹವಮಾನ ಹಾಗೂ ಒಲಿಂಪಿಕ್ಸ್ ಆಟದ ಬಗ್ಗೆ ಸಂಭಾಷಣೆ ಮಾಡಿರಬಹುದು. ಆ ಎರಡು ವರ್ಷಗಳ ಅವಧಿಯಲ್ಲಿ ಆ ಸಿಪಾಯಿಗಳಲ್ಲಿ ಕೆಲವರು ಕ್ರೈಸ್ತರಾಗಿರಬಹುದು. ನಂತರದಲ್ಲಿ ಆ ಪಹರೆಯವರು ಅರಮನೆಯ ಕರ್ತವ್ಯವನ್ನು ನಿರ್ವಹಿಸುವಾಗ, ಅಲ್ಲಿ ಸುವಾರ್ತೆಯನ್ನು ಪ್ರಸರಿಸಿದ್ದರು ಆದ್ದರಿಂದ ಪೌಲನು ಫಿಲಿಪ್ಪಿಯವರಿಗೆ ಬರೆಯುವಾಗ, "*ಚಕ್ರವರ್ತಿಯ ಅರಮನೆಗೆ ಸೇರಿದವರು* ವಿಶೇಷವಾದ ವಂದನೆಗಳನ್ನು ಹೇಳುತ್ತಾರೆ" (ಫಿಲಿಪ್ಪ 4:22; ಒತ್ತಿ ಹೇಳಿದ್ದು ನನ್ನದು). (ಸಹಜವಾಗಿ ಪೌಲನು ತನ್ನ ಪಿರ್ಯಾದನ್ನು ನೇರವಾಗಿ ನೀರೋ ಚಕ್ರವರ್ತಿಯ ಬಳಿ ಹೇಳಲು ಸಾಧ್ಯವಾಯಿತು [ಅಪೊಸ್ತಲರ ಕೃತ್ಯಗಳು 27:24].)

(3) ಪೌಲನ ರೋಮಾಯದ ಸೇವೆಯಲ್ಲಿ, ಅವನ ಬಂಧನ ನಿಮಿತ್ತ, ಅವನಿಗೆ ರಾಜ ಸಂರಕ್ಷಣೆಯು ದೊರಕಿತ್ತು. ಪೌಲನು ದೇವರ ತಿಳುವಳಿಕೆಯ ಸಂರಕ್ಷಣೆಯನ್ನು ಒಪ್ಪಿಕೊಂಡಿದ್ದನು, ಅದು ದೇವರೆ ಅವನಿಗಾಗಿ ಏರ್ಪಾಡಿಸಿದ್ದ ಏರ್ಪಾಟಾಗಿತ್ತು: "... ನನಗೆ ಸಂಭವಿಸಿರುವದು ಸುವಾರ್ತೆಯ ಪ್ರಸಾರಣೆಗೆ ಸಹಾಯವಾಯಿತೆಂದು ನೀವು ತಿಳಿಯಬೇಕೆಂಬುದಾಗಿ ಅಪೇಕ್ಷಿಸುತ್ತೇನೆ" (ಫಿಲಿಪ್ಪಿ 1:12).

**ರೋಮಾಯದ ಅಧಿಕಾರಿಗಳಿಂದ ಅಡ್ಡಿ ಉಂಟಾಗಲಿಲ್ಲ (ವಚನಗಳು 30, 31)**

ಪೌಲನು ಬಂಧಿತನಾಗಿರುವಾಗಲೂ ಅವನು ತನ್ನ ಮನೆಯಲ್ಲಿ ಸ್ವತಂತ್ರನಾಗಿದ್ದನು: "ತನ್ನ ಬಳಿಗೆ ಬರುವವರೆಲ್ಲರನ್ನು ಸೇರಿಸಿಕೊಳ್ಳುತ್ತಿದ್ದನು" (ವಚನ 30ಬಿ) - ಅವರಲ್ಲಿ ಯೆಹೂದ್ಯರು ಮತ್ತು ಅನ್ಯರೂ, ಕ್ರೈಸ್ತರು ಹಾಗೂ ಕ್ರೈಸ್ತೇತರರು ಒಳಗೊಂಡಿದ್ದರು. "ಅವನು ದೇವರ ರಾಜ್ಯ ವನ್ನು ಪ್ರಸಿದ್ಧ ಪಡಿಸುತ್ತಾ ಕರ್ತನಾದ ಯೇಸು ಕ್ರಿಸ್ತನ[45] ವಿಷಯವಾಗಿ ಉಪದೇಶಮಾಡುತ್ತಾ ಇದ್ದನು" (ವಚನ 31ಎ). "ತೆರೆದ" ಎಂಬ ಗ್ರೀಕ್ ಪದವು ಅವನು ಸ್ಪಷ್ಟವಾಗಿಯೂ, ಭರವಸದಿಂದಲೂ ಮಾತನಾಡಿದನು ಎಂಬ ಅರ್ಥವನ್ನು ನೀಡುತ್ತದೆ.[46]

ಅವನು ಬಾಯಿಮಾತಿನಿಂದ ಹೇಳುವ ಜೊತೆಯಲ್ಲಿಯೇ, ತನ್ನ ಬರವಣಿಗೆಯ ಪ್ರಭಾವವನ್ನು ಬೀರಿದನು. ಈ ಸಮಯದಲ್ಲಿಯೇ ಅವನು ಕೆಲವು ಪತ್ರಿಕೆಗಳನ್ನು ಪೂರ್ಣಮಾಡಿದನು:[47] ಎಫೆಸ ಕ್ರಿಸ್ತನ ಮತ್ತು ಆತನ ಸಭೆಯ ಕುರಿತಾಗಿದ್ದು, ಫಿಲಿಪ್ಪಿ ಪೌಲನು ಫಿಲಿಪ್ಪಿಯವರೆಗೆ ಬರೆದ ಪ್ರೇಮ ಪತ್ರವಾಗಿದೆ; ಕೊಲೊಸ್ಸೆಯಲ್ಲಿ ತಪ್ಪು ಬೋಧನೆಯನ್ನು ಖಂಡಿಸಿ, ಯೇಸುವಿಗೆ ಮಹತ್ವದ ಸ್ಥಾನವನ್ನು ನೀಡಲಾಗಿದೆ; ಮತ್ತು ಫಿಲೋಮೋನನ ಪತ್ರಿಕೆಯು, ಸ್ನೇಹಿತನಿಗೆ ಬರೆದ ಖಾಸಗಿ ಪತ್ರಿಕೆಯಾಗಿದೆ. ಇದರಲ್ಲಿ ಪೌಲನ ರೋಮಾಯದ ಸಮಯದ ಕಾರ್ಯಗಳನ್ನು ಕಾಣುತ್ತೇವೆ.

ಲೂಕ ಮತ್ತು ತಿಮೊಥೆಯರು[48] ಪೌಲನ ಹಳೆಯ ಸ್ನೇಹಿತರಾಗಿದ್ದರೆ, ಅಪೊಸ್ತಲನೊಂದಿಗೆ ಸಂಧಾನ ಮಾಡಿಕೊಂಡ[49] ಯೋಹಾನ ಮಾರ್ಕನ ಹೆಸರನ್ನು ಹೆಸರಿಸುವದು ಯೋಗ್ಯವಾ ಗಿದೆ. ಅವನ ಸಹವರ್ತಿಗಳಾದ ಅರಿಸ್ತಾರ್ಕನು, [50] ಎಪಫ್ರೊದಿತನು, ತುಖಿಕನು, ಯೂಸ್ತನು, ಎಪಫ್ರನು ಮತ್ತು ದೇಮನ ಹೆಸರುಗಳು ಇವೆ.[51] ಅವರಲ್ಲಿ ಅನೇಕರನ್ನು ಪೌಲನು ಸುವಾರ್ತೆ ಸಾರಲು ಆ ಸಾಮ್ರಾಜ್ಯಕ್ಕೆ ಕಳುಹಿಸಿದನು.

ಪೌಲನು ನೇರವಾಗಿ ಹಾಗೂ ಪರೋಕ್ಷವಾಗಿ ಸ್ಥಾಪಿಸಿದ ಸಭೆಗಳ ಕುರಿತಾಗಿ ಮಾಡಿದ ಸಹಾಯದ ಕುರಿತು ಅವನ ಸೆರೆಮನೆಯ ಪತ್ರಿಕೆಗಳು ತಿಳಿಸುತ್ತವೆ (ನೋಡಿ ಫಿಲಿಪ್ಪಿ 4:1).[52] ಮತ್ತು ಅವನು ಆ ಸಭೆಗಳ ಸಂಪರ್ಕವನ್ನು ಮುಂದುವರಿಸಿದನು. ಕೆಲವು ಸಭೆಗಳವರು ತಮ್ಮ ಪ್ರತಿನಿದಿಗಳನ್ನು ರೋಮಾಯಕ್ಕೆ ಕಳುಹಿಸಿದ್ದರು (ಫಿಲಿಪ್ಪಿ 4:18 ನೋಡಿರಿ) ಪೌಲನು ಸಹ ತನ್ನ ಪ್ರತಿನಿಧಿಗಳನ್ನು ಕಳುಹಿಸಿ ತನ್ನ ಅಗತ್ಯಗಳನ್ನು ತಿಳಿಸಿದನು.[53]

ಅವನ ಪತ್ರಿಕೆಗಳಲ್ಲಿ ತನ್ನ ಮಾನಸಿಕ ಸ್ಥಿತಿಯನ್ನು ತಿಳಿಯ ಪಡಿಸಿರುವದು ಚಕಿತಗೊಳಿಸುತ್ತದೆ. ಅವನು ತನ್ನ "ಹೋರಾಟ" "ಹಿಂಸೆ" ಮತ್ತು ಅವನ "ವೇದನೆಗಳ" ಕುರಿತು ಹೇಳಿರುವನು (ಫಿಲಿಪ್ಪಿ 1:30; ಕೊಲೊಸ್ಸೆ 1:24; 2:1). ಅವನಿಗೆ ಈಗ ವೃದ್ಧಾಪ್ಯ ಬಂದಿದ್ದು, ಅಪವಾದಗಳನ್ನು ಎದುರಿಸುತ್ತಿದ್ದನು (ಫಿಲೆಮೋನ 9), ಮತ್ತು "ರೋಮಾಯದಲ್ಲಿ ಕೆಲವು ಸಹೋದರರು ಅವನ ಮೇಲಿನ ಅಸೂಯೆಯಿಂದ ಸುವಾರ್ತೆಯನ್ನು ಸಾರುತ್ತಿದ್ದರು, ... ಇದರಿಂದ ಅವನಿಗೆ ಹೆಚ್ಚಾದ ವೇದನೆ ಉಂಟಾಯಿತು" (ಫಿಲಿಪ್ಪಿ 1:15, 17). ಹೀಗೆಯೇ ತನ್ನ ಎಲ್ಲಾ ಹಿಂಸೆಗಳ ನಡುವೆಯೂ ಅವನು ಸಕಾರಾತ್ಮಕವಾಗಿಯೇ ಯೋಚಿಸುತ್ತಿದ್ದನು: "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿಪ್ಪಿ 4:13; ಕೊಲೊಸ್ಸೆ 1:29).[54] ಅವನ ಭವಿಷ್ಯ ಏನೇ ಆಗಿದ್ದರೂ - ಬಿಡುಗಡೆಯಾಗಲೀ ಅಥವಾ ಮರಣವೇ ಬರುವದಿದ್ದರೂ, - ಅವನು ಎಲ್ಲಕ್ಕೂ ಸಿದ್ಧನಾಗಿದ್ದನು (ಫಿಲಿಪ್ಪಿ 1:19-24, 27; 2:17).[55]

ಪೌಲನು ಚಿಂತನೆಯು ಸುವಾರ್ತೆಯ ಸಾರೋಣವಾಗಿತ್ತು. ಅವನು ಪ್ರಾರ್ಥನಾ ಮನವಿಯನ್ನು ಮಾಡಿ, "ಇದಲ್ಲದೆ ನಮಗೋಸ್ಕರವೂ ಪ್ರಾರ್ಥನೆ ಮಾಡಿರಿ. ದೇವರ ಸತ್ಯಾರ್ಥವನ್ನು ಪ್ರಸಂಗಿಸುವದಕ್ಕೆ ... ಅನುಕೂಲವಾದ ಸಂದರ್ಭವನ್ನು ನಮಗೆ ದಯಪಾಲಿಸಿ ನಾನು ಅದನ್ನು ಹೇಳಬೇಕಾದ ರೀತಿಯಲ್ಲಿ ತಿಳಿಸುವಂತೆ ಅನುಗ್ರಹ ಮಾಡ ಬೇಕೆಂದು ಬೇಡಿಕೊಳ್ಳಿರಿ" (ಕೊಲೊಸ್ಸೆ 4:3, 4).[56] ಅವನು ಆನಂದದಿಂದ ಬರೆದು:

> ಸಹೋದರರೇ, ನನಗೆ ಸಂಭವಿಸಿರುವದು ಸುವಾರ್ತೆಯ ಪ್ರಸಾರಣೆಗೇ ಸಹಾಯವಾಯಿತೆಂದು ನೀವು ತಿಳಿಯಬೇಕೆಂಬದಾಗಿ ಅಪೇಕ್ಷಿಸುತ್ತೇನೆ. ಹೇಗಂದರೆ ನನ್ನ ಬೇಡಿಗಳು ಕ್ರಿಸ್ತನ ನಿಮಿತ್ತವೇ ಎಂದು ಅರಮನೆಯ ಪಹರೆಯವರೆಲ್ಲರಿಗೂ ಮಿಕ್ಕಾದವರೆಲ್ಲರಿಗೂ ಪ್ರಸಿದ್ಧವಾಯಿತು. ಇದಲ್ಲದೆ ಸಹೋದರರಲ್ಲಿ ಬಹಳ ಜನರು ನನ್ನ ಬೇಡಿಗಳಿಂದಲೇ ಕರ್ತನಲ್ಲಿ ಭರವಸವುಳ್ಳವರಾಗಿ ದೇವರ ವಾಕ್ಯವನ್ನು ನಿರ್ಭಯದಿಂದ ಹೇಳುವದಕ್ಕೆ ಇನ್ನೂ ವಿಶೇಷ ಧೈರ್ಯ ಹೊಂದಿದ್ದಾರೆ (ಫಿಲಿಪ್ಪಿ 1:12-14).

ದೇವರು ಅವನ ಪ್ರಾರ್ಥನೆಗೆ ಉತ್ತರವನ್ನು ನೀಡಿ, ಅವನ ಪ್ರಯಾಸವನ್ನು ಆಶೀರ್ವದಿಸಿದನು. ಮತ್ತು ಅರಮನೆಯ ಪಹರೆಯವರಿಗೂ, ಹಾಗೂ ಕೈಸರನ ಮನೆಯವರಿಗೂ ಸುವಾರ್ತೆಯ ಪ್ರಭಾವವನ್ನು ಬೀರಿದನು (ಫಿಲಿಪ್ಪಿ 1:13; 4:22), ಅಲ್ಲಿ ಮಹತ್ವದ ಒಂದು ಪರಿವರ್ತನೆಯ ಬಗ್ಗೆಯೂ ತಿಳಿದಿದ್ದೇವೆ. ಓಡಿಹೋದ ಗುಲಾಮನಾದ ಓನೇಸೀಮನು ಪರಿವರ್ತನೆಗೊಂಡನು, ಅವನು ಪ್ರಧಾನ ಪಟ್ಟಣಕ್ಕೆ ಓಡಿ ಬಂದಾಗ, ಪೌಲನಿಂದ ಪರಿವರ್ತನೆಗೊಂಡನು (ಫಿಲೆಮೋನ 10-21). ಪೌಲನ ಉಪದೇಶ ಹಾಗೂ ಪ್ರಸಂಗದ ಪ್ರಭಾವದಿಂದ ರೋಮಾಯದಲ್ಲೂ ಅದರ, "ಸುತ್ತ ಮುತ್ತಲಿನ ಅನೇಕರು ಕರ್ತನನ್ನು ಕಂಡುಕೊಂಡರು ಇದರಲ್ಲಿ ಸಂದೇಹವಿಲ್ಲ" (ಅಪೊಸ್ತಲರ ಕೃತ್ಯಗಳು 28:31).

ಈಗ ನಾವು ಲೂಕನ ಅಂತಿಮವಾದ, "ಅಂತಿಮವಾದ" ವಾಕ್ಯಗಳಿಗೆ ಬಂದಿದ್ದೇವೆ. ಇದು ಅವನ ಕಡೆಯ ಮಾತಾಯಿತು. ಅದು ಬಹಳ ಪ್ರಮುಖವಾದ ವಾಕ್ಯವಾಗಿದೆ: "ಅವನು ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸುತ್ತಾ ಕರ್ತನಾದ ಯೇಸು ಕ್ರಿಸ್ತನ ವಿಷಯವಾಗಿ *ಉಪದೇಶ ಮಾಡುತ್ತಾ* ಇದ್ದನು." ಇದರಲ್ಲಿ ಅವನಿಗೆ ಯಾವ ಅಡ್ಡಿಯೂ ಉಂಟಾಗಲಿಲ್ಲ (ವಚನ 31ಬಿ; ಒತ್ತಿ ಹೇಳಿದ್ದು ನನ್ನದು). ಪೌಲನ ಕೈಗಳಿಗೆ ಬೇಡಿ ಹಾಕಿದ್ದರೂ, ಅವನ ಕೈಗಳು ಸ್ವತಂತ್ರವಾಗಿದ್ದವು. ಅವನಿಗೆ ದೈಹೀಕವಾದ ಸ್ವತಂತ್ರ ಇಲ್ಲದೇ ಇದ್ದರೂ, ಸುವಾರ್ತೆಗೆ ಸ್ವತಂತ್ರವಿತ್ತು. ಅವನು ಬಂಧಿತನಾಗಿದ್ದರೂ ವಾಕ್ಯವು ಸ್ವತಂತ್ರವಾಗಿ ಪ್ರಸಾರಣವಾಗಿತ್ತು (2 ತಿಮೊಥೆ 2:9).

ಸುವಾರ್ತೆಯು ಲೋಕದಲ್ಲೆಲ್ಲಾ ಪ್ರಸಾರಣವಾಯಿತು ಎಂಬ ವಿಜಯದ ಸಂಕೇತದಿಂದ ಲೂಕನು ತನ್ನ ಲೇಖಣಿಯನ್ನು ಸ್ಥಗಿತಗೊಳಿಸಿದನು.

## ಮುಕ್ತಾಯ

"ಅಂತಿಮವಾದ ವಾಕ್ಯ" ಎಂಬದು ಈ ಪಾಠದ ತಲೆಬರಹವಾಗಿದೆ. ಅಪೊಸ್ತಲರ ಕೃತ್ಯಗಳು ಪುಸ್ತಕದ ಅಂತಿಮ ವಾಕ್ಯವಷ್ಟೆ ನವಂಬರ್ 10, 1942ರಲ್ಲಿ, ವಿನ್‌ಸ್ಟನ್ ಚರ್ಚಿಲ್‌ರವರು ಚಿಂತೆಗೊಳಗಾದ ಜನರೊಂದಿಗೆ ಮಾತನಾಡುತ್ತಿದ್ದರು. ಅನೇಕ ದಿವಸಗಳ ಕಾಲ ಹಿಟ್ಲರನ ಲುಫ್ಟ್‌ವಾಫೆ ಎಂಬಾತನು ಲಂಡನ್ ಪ್ರಾಂತದಲ್ಲಿ ಬಾಂಬ್ ಹಾಕುತ್ತಿದ್ದನು. ಆ ಯುದ್ಧದಲ್ಲಿ ತೊಂದರೆಗೀಡಾದ ಜನರಿಗೆ ಆ ಪ್ರಧಾನಮಂತ್ರಿ ಏನನ್ನು ಹೇಳಲು ಸಾಧ್ಯವಿತ್ತು? ಅವನು ನಿಧಾನವಾಗಿ ಈ ಮಾತುಗಳನ್ನು ಹೇಳಿದನು: "ಇದು ಅಂತ್ಯವಲ್ಲ, ಇದು ಅಂತ್ಯದ ಆರಂಭವೂ ಅಲ್ಲ. ಪ್ರಾಯಶಃ, ಆರಂಭದ ಅಂತ್ಯವೇ ಎಂದು ಹೇಳಿದನು." ನಾವು ಈ ಮಾತುಗಳಿಗೆ ನಮ್ಮನ್ನು ಒಳಪಡಿಸಿಕೊಳ್ಳಬಹುದು. ಅಪೊಸ್ತಲರ ಕೃತ್ಯಗಳು 28 ಸುವಾರ್ತೆಯ ಅಂತ್ಯದ ಪದಗಳಲ್ಲ; ಶುಭ ಸಮಾಚಾರದ ಆರಂಭದ ಪದಗಳಷ್ಟೆ. ನಮ್ಮ ಧ್ಯಾನ ಸರಣಿಯ ಮುಂದಿನ ಪಾಠದಲ್ಲಿ (ಅಂತಿಮ), ಲೂಕನು ಬರೆದ ಮಾತುಗಳಲ್ಲಿನ ಮುಂದುವರಿಕೆಯನ್ನು ಗಮನಿಸೋಣ.

ಇದನ್ನು ಅಂತ್ಯಗೊಳಿಸುವಾಗ, ನಾನು ನಿಸ್ಸಾಹಯಕನಾದರು, ಆಶ್ಚರ್ಯಗೊಳ್ಳುತ್ತೇನೆ: ಸುವಾರ್ತೆಯ ಕುರಿತ, ನಮ್ಮ ಜೀವಿತದಲ್ಲಿನ "ಕಡೆಯ ಮಾತಾದರೂ" ಏನು?

ಪೌಲನಂತೆ, ಲೋಕದಾದ್ಯಂತ ಸುವಾರ್ತಾ ಪ್ರಸಾರಣಗೆ ಸಹಾಯವಾಗಿದ್ದೇವೋ? "ನಮ್ಮ ನೆರೆಹೊರೆಯವರಿಗೆ ಸುವಾರ್ತಾ ಪ್ರಸಾರಣೆಯನ್ನು ಮಾಡಿದ್ದೇವೋ? ಅಂತಿಮ ಪದಗಳು ಶಕ್ತಿಯುತವಾಗಿರಬೇಕಲ್ಲವೇ." "ಅವನು ತನ್ನ ಬಗ್ಗೆಯೇ ಚಿಂತಿಸಿದನೇ; ತನಗಾಗಿ ಮಾತ್ರ ಜೀವಿಸಿದನೇ; ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ, ಅವನ ಪ್ರಾಣನಷ್ಟಪಟ್ಟರೆ ಅವನಿಗೇನು ಪ್ರಯೋಜನ? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು?" (ಮತ್ತಾಯ 16:26).[57]

---

ಟಿಪ್ಪಣಿಗಳು

[1]ವಚನ 31 ಲೂಕನು ಅಪೊಸ್ತಲರ ಕೃತ್ಯವನ್ನು ಅಂತ್ಯಗೊಳಿಸುವ ವಚನವಾಗಿದೆ. 19:20ರ ಸಕಲ ಸಾರಾಂಶ ಅಪೊಸ್ತಲರ ಕೃತ್ಯಗಳು 28ರ ಘಟನೆಯ ಸಾರಾಂಶವನ್ನು ಹೊಂದಿರುತ್ತದೆ. [2]ಮಾರ್ಚ್ ತನಕ ಮೆಡಿಟೇರೇನಿಯನ್ನಿನ ಪ್ರಯಾಣ ಕಷ್ಟಕರವಾಗಿತ್ತು. ಆದರೆ ಕರಾವಳಿಯ ಪ್ರಯಾಣವನ್ನು ಫೆಬ್ರವರಿಯಲ್ಲಿ ಮಾಡಬಹುದಿತ್ತು. [3]ಪುರಾಣದಲ್ಲಿರುವ (ಅವಳಿ ಜವಳಿಗಳು) ಸಹೋದರರು. [4]ಈ ಟಿಪ್ಪಣಿಯನ್ನು 1 ಕೊರಿಂಥ 8:4-6 ನೋಡಿರಿ. [5]ಲೂಕನು ಸಹ ಶತಾಧಿಪತಿ, ಸಿಪಾಯಿಗಳು ಹಾಗೂ ಇತರ ಖೈದಿಗಳೊಂದಿಗೆ ಪ್ರಯಾಣಿಸಿರಬಹುದು. [6]ಮೆಲೀತೆಯಿಂದ, ರೋಮಾಯದ ನಕ್ಷೆ ನೋಡಿರಿ. [7]ಗ್ರೀಕ್ ಪುರಾಣದ ಪ್ರಕಾರ ಚಾರಿಬಿಡಿಸ್ ಮತ್ತು ಸಿಲ್ಲ ಸಮುದ್ರ ಬೂತಗಳು ನಾವಿಕರನ್ನು ನಾಶ ಮಾಡುತ್ತಿದ್ದವು ಅದು ದೊಡ್ಡ ಸುಳಿಯಾಗಿತ್ತು. [8]"ಒಂದು ಹಡನ್ನು ಹತ್ತಿ ಹೋರಟನು" ಎಂಬ ಪದವು ಹಡಗನ್ನು ಗೇಣಿಯಿಂದ ನಡೆಸುವ ವಿಧಾನವನ್ನು ಸೂಚಿಸುತ್ತದೆ. J. B. Phillips ಭಾಷಾಂತರದಲ್ಲಿ "ಹಡಗದ ಗೇಣಿಯೆಂದು ಭಾಷಾಂತರಿಸಿದರು. [9]Bernard R. Youngman, *Background to the Bible*, Book 4, *Spreading the Gospel* (London: Hulton Eductional Publications, 1956), 90. ಕ್ರಿ.ಶ 79ರಲ್ಲಿ ash from Vesuvius ರವರು, ಪೊಂಪಿಯನ್ನು ದೊಡ್ಡ ತರ ಅಗ್ನಿ ಪ್ರವಾಹ ಶಿಲೆಯಲ್ಲಿ ಹುತಿಟ್ಟನು. [10]"ದೇಹದ ಶೂಲೆಯು" ಪೌಲನನ್ನು ಬಲಹೀನ ಮಾಡಿರಬಹುದು.

[11]ತ್ರೋವದಲ್ಲಿ ಇದೇ ಘಟನೆ ನಡೆಯಿತು. *ಅಪೊಸ್ತಲರ ಕೃತ್ಯಗಳು, 2ನೇ.* [12]ಕೊರ್ನೇಲ್ಯನೊಂದಿಗೆ ಇತರೆ ಸಿಪಾಯಿಗಳು ಕ್ರೈಸ್ತರಾದರು (ಅಪೊಸ್ತಲರ ಕೃತ್ಯಗಳು 10). ಅರಮನೆಯ ಪಹರೆಯವರು ಸಹ (ಫಿಲಿಪ್ಪಿ 1:13). [13]ಅಪ್ಪಿಯಸ್ ಕ್ಲಾಡಿಯಸ್ ಕೇಯಸ್‌ನ ನೆನಪಿನಾರ್ಥ "ಅಪ್ಪಿಯನ್ ಮಾರ್ಗ" ಎಂದು ಹೆಸರಿಸಿಟ್ಟಿದ್ದರು. ಕ್ರಿ.ಪೂ. 312 ಆ ಕೆಲಸವನ್ನು ಆರಂಭಿಸಿದ್ದನು, ಸಾರ್ವಜನಿಕರ ಹಿತಾಸಕ್ತಿ ಹೊಂದಿದವನು. [14]ಗ್ರಿಕ್‌ನಲ್ಲಿ "ಅಪ್ಪಿವೇದಕೆ" (ನೋಡಿರಿ KJV) ಎಂದಿದೆ, ಅದನ್ನು ವ್ಯವಹಾರದ ನಿಮಿತ್ತ "ಅಪ್ಪಿಯ ಪೇಟೆ" ಎನ್ನಿಸಿದ್ದರು. [15]ತ್ರಿ ಚಕ್ರ ಅಂದರೆ ವಿಶ್ರಾಂತಿಗಾಗಿ ಇಳುಕೊಳ್ಳುವ ಸ್ಥಳ (ನೋಡಿರಿ KJV). [16]ಕೆಲವರು 33 ಮೈಲುಗಳಲ್ಲೇ ನಿಂತರು, ಇತರರು ಏಕೆ 10 ಮೈಲು ಮುಂದೆ ಹೋದರು? ಒಬ್ಬ ಪ್ರಸಂಗಿಗಾಗಿ ಹೇಳಿದಂತೆ, ಯೌವನಸ್ಥ ಪ್ರಸಂಗಿಗಳು ನಡೆದು ಹೋದರು. ಅದು ಅವರ ಯೋಜನೆಯಾಗಿತ್ತು. [17]F. F. Bruce, *The Book of Acts,* rev. ed., The New International Commentary on the New Testament (Grand Rapids, Mich.: Wm. B. Eerdmans Publishing Co., 1988), 502. [18]ಅಪೊಸ್ತಲರ ಕೃತ್ಯದಲ್ಲಿನ "ನಾವು" ಎಂಬ ಕಡೆಯ ಹೇಳಿಕೆ. [19]ವೆಸ್ಟರ್ನ್ ಟೆಕ್ಸ್ ಪ್ರಕಾರ ಶತಾಧಿ ಪತಿಯು ಖೈದಿಗಳನ್ನು ಪಹರೆಯ ಅಧಿಪತಿಗೆ ಒಪ್ಪಿಸಿದನು. ಪೌಲನು ಸ್ವತಂತ್ರವಾಗಿ ವಾಸಿಸಿದ್ದನು. [20]"ತಾನೇ" ಎಂದರೆ ಇತರ ಖೈದಿಗಳ ಸಂಗಡ ವಾಸಿಸಲಿಲ್ಲ.


[21]ಫೆಸ್ತನ ವರದಿ ನ್ಯಾಯಯುತವಾಗಿದ್ದರಿಂದ, ಪೌಲನನ್ನು ಸರಿಯಾಗಿ ನಡೆಸಿಕೊಂಡಿರಬಹುದು.ಯೂಲ್ಯ ಮತ್ತು ಶತಾಧಿಪತಿಯು ಪೌಲನ ಕುರಿತು ಒಳ್ಳೆಯ ವರದಿ ನೀಡಿರಬಹುದು. [22]ನನ್ನ ರೋಮಾ ಪ್ರವಾಸದಲ್ಲಿ ಪೌಲನು ಇದ್ದ ಸ್ಥಳವನ್ನು ವೀಕ್ಷಿಸಿರುವೆನು. [23]ಪೌಲನು ತನ್ನ ಮೇಲಿನ ಅಪವಾದವನ್ನು ಒಪ್ಪಿಕೊಳ್ಳಲಿಲ್ಲ. [24]ಪೌಲನು ತನ್ನ ಬೇಡಿಯ ಕೈಗಳನ್ನು ಮೇಲಕ್ಕೆ ತೋರಿಸಿರಬಹುದು. [25]"ಇಸ್ರಾಯೇಲ್ಯರ ನಿರೀಕ್ಷೆ" ಅಂದರೆ ಮೆಸ್ಸೀಯನು ಬಂದು ಪುನಃ ಸ್ಥಾಪಿಸುವನು ಎಂಬ ಅರ್ಥ "ಪುನರುತ್ಥಾನವು" ಸಹ (23:6; 26:6, 7 ನೋಡಿ). [26]ಯೆರೂಸಲೇಮಿನಿಂದ ಯಾವುದೇ ವರದಿಯು ರೋಮಾಯಕ್ಕೆ ಸಲುಪಲಿಲ್ಲ. [27]*ಅಪೊಸ್ತಲರ ಕೃತ್ಯಗಳು, 5ನೇ* ಪುಸ್ತಕದಲ್ಲಿ "ಪೌಲನೇ, ನೀನು ಮಾಡಿದ್ದಾದರೂ ಏನು?" ಎಂಬ ಪಾಠದಲ್ಲಿರುವ ಅಪೊಸ್ತಲರ ಕೃತ್ಯಗಳು 24:5, 14 ಟಿಪ್ಪಣಿಯನ್ನು ನೋಡಿರಿ. [28]ಸೈತಾನನು ಯಥಾರ್ಥ ಕ್ರೈಸ್ತರಿಗೆ ವಿರೋಧಿಯಾಗಿದ್ದೇನೆ. [29]ಹಲವರು

"ಬಿಡಾರ" ಎಂಬುದು 30ನೇ ವಚನದಲ್ಲಿರುವ "ಮನೆ" ಆಗಿರಲಾರದು ಎಂದು ಹೇಳುತ್ತಾರೆ. ಇವೆರಡು ಒಂದೇ ಹೇಳಲು ನನಗೆ ಯಾವ ಸಂದೇಹವಿಲ್ಲ. ಹೌದೋ, ಅಲ್ಲವೋ, ಎಂಬುದು ಪ್ರಾಮುಖ್ಯವಲ್ಲ. [30]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ "ಮಾದರಿಯ ಒಂದು ಪರಿವರ್ತನೆ" ಎಂಬ ಪಾಠದಲ್ಲಿ ಅಪೊಸ್ತಲರ ಕೃತ್ಯಗಳು 1:3ರ ಟಿಪ್ಪಣಿಯನ್ನು ನೋಡಿರಿ.

[31]ಅಪೊಸ್ತಲರ ಕೃತ್ಯಗಳು 17:1-3ರ ಟಿಪ್ಪಣಿ ನೋಡಿರಿ. [32]ಇದು ಜನ ಸಂದಣಿಯ ಸಮಯವಾಗಿತ್ತು. [33]ಯೆಶಾಯ ಪುಸ್ತಕದ ಮೇಲೆ ಈ ವಾಕ್ಯಭಾಗವು ದೈವ ಪ್ರೇರೇಪಿತವಾದ ಪುಸ್ತಕವೆಂಬುದಕ್ಕೆ ಬಲವಾದ ವಾಕ್ಯವಾಗಿದೆ. [34]ವಚನ 17ರಲ್ಲಿ ಯೆಹೂದ್ಯ ನಾಯಕರನ್ನು ಕುರಿತು "ತಂದೆಗಳೇ" ಎನ್ನಲಾಗಿದೆ. ಹಾಗೂ "ನಿಮ್ಮ ಪಿತೃಗಳು" ಯೇಸುವನ್ನು ತಿರಸ್ಕರಿಸಿದರು ಎಂದು ಪೌಲನು ಹೇಳಿದನು. [35]ಮತ್ತಾಯ 13, ಮಾರ್ಕ 4, ಮತ್ತು ಲೂಕ 8, ಪ್ರಕಾರ ಯೋಹಾನ 12:40 ನಂತರದಲ್ಲಿ ಬರೆಯಲಾಗಿದೆ. [36]Bruce, 508. [37]Rick Atchley, "The Story That Never Ends," Sermon preached at the Southern Hills church of Christ, Abilene, Texas, on 3 May 1987. [38]ಪೌಲನ ರೋಮಾಯದ ವಾಸದ ಕುರಿತು ಲೂಕನು 16 ವಚನಗಳಲ್ಲಿ ವಿವರಿಸಿರುವನು. ಅದರಲ್ಲಿನ ಮೂರು ವಚನಗಳು ಯೆಹೂದ್ಯರು ಸುವಾರ್ತೆಯನ್ನು ನಿರಾಕರಿಸಿದರು ಎಂದು ಹೇಳುತ್ತದೆ. [39]Richard Oster, *The Acts of the Apostles,* Part 2, The Living Word Commentary Series (Austin, Tex.: Sweet Publishing Co., 1979), 180. (Emphasis his.) [40]I. Howard Marshall, *The Acts of the Apostles,* The Tyndale New Testament Commentaries, ed. R. V. G. Tasker (Grand Rapids, Mich.: Wm. B. Eerdmans Publishing Co., 1980), 425.

[41]Ibid. [42]ರೋಮಾಯರು ಅವನ ಹೊಣೆಯಾಗಿದ್ದು. [43]ಈ ಸಮಯದಲ್ಲಿ ಫಿಲಿಪ್ಪಿ ಸಭೆಯವರು ಆರ್ಥಿಕ ಸಹಾಯ ನೀಡಿದ್ದರು (ಫಿಲಿಪ್ಪಿ 2:25; 4:10-14, 18). ಪೌಲನು ತನ್ನ ಸ್ವಾಸ್ತ್ಯವನ್ನು ಪಡೆದಿರಬಹುದು, ಗುಡಾರ ನೇಯುವ ಮೂಲಕ ಸ್ವಸಹಾಯ ಮಾಡಿಕೊಂಡನು. [44]J. W. Mc Garvey, *New Commentary on Acts of Apostles,* vol. 2 (Delight, Ark.: Gospel Light Publishing Co., n.d.), 287. [45]ಕರ್ತನ ಕುರಿತು "ನಮ್ಮ ಕರ್ತನಾದ ಯೇಸು ಕ್ರಿಸ್ತನು" ಎನ್ನಲಾಗಿದೆ. [46]Adapted from John R. W. Stott, *The Message of Acts* (Downers Grove, Ill.: Inter-Varsity Press, 1994), 400. [47]ಪೌಲನ ಸೆರೆವಾಸದ ಕುರಿತು (ಎಫೆಸ 3:1; 4:1 ಫಿಲಿಪ್ಪಿ 1:13; ಕೊಲೊಸ್ಸೆ 4:3, 18; ಫಿಲೆಮೋನ 1, 9, 13). ಕೈಸರನ ಮನೆಯವರು (ಫಿಲಿಪ್ಪಿ 4:22; 1:13). ಇವುಗಳು ರೋಮಾಯದಿಂದ ಬರೆಯಲ್ಪಟ್ಟವು ಎಂಬ ಅಭಿಪ್ರಾಯವಿದೆ. ಒಂದು ವೇಳೆ ಇಬ್ರಿಯ ಗ್ರಂಥಕರ್ತೃ ಪಾಲನಾಗಿದ್ದರೆ, ಅದು ಸಹ ರೋಮಾಯದಿಂದಲೇ ಬರೆದದ್ದಾಗಿರಬಹುದು (ಇಬ್ರಿಯ 13:19, 23, 24). [48]ಫಿಲಿಪ್ಪಿ 1:1; 2:19-23; ಕೊಲೊಸ್ಸೆ 1:1; 4:14; ಫಿಲೆಮೋನ 24 ನೋಡಿರಿ. [49]ಕೊಲೊಸ್ಸೆ 4:10; ಫಿಲೆಮೋನ 24; ಅಪೊಸ್ತಲರ ಕೃತ್ಯಗಳು 13:13; 15:36-40; 2 ತಿಮೊಥೆ 4:11. [50]ಅರಿಸ್ತಾರ್ಕನು ಪೌಲನೊಂದಿಗೆ ಪ್ರಯಾಣಿಸಿದ್ದನು.

[51]ಎಫೆಸ 6:21; ಫಿಲಿಪ್ಪಿ 2:25; ಕೊಲೊಸ್ಸೆ 1:7; 4:7, 10, 11-14; ಫಿಲಿಪ್ಪಿ 23, 24 ದೇವನ ಕುರಿತು 2 ತಿಮೊಥೆ 4:10 ನೋಡಿರಿ. [52]ಕೊಲೊಸ್ಸೆ - ಲವೊದಿಕಿಯಾ, ಎಫೆಸ ಸಭೆಗಳು ಒಳಗೊಂಡಿವೆ, ಅಲ್ಲಿ ಅವನು ವೈಯಕ್ತಿಕವಾಗಿ ಸಾರಿರುವದಿಲ್ಲ (ಕೊಲೊಸ್ಸೆ 1:7, 8; 2:1; 4:16). [53]ಎಫೆಸ 6:21; ಫಿಲಿಪ್ಪಿ 2:19, 23, 25-30; ಕೊಲೊಸ್ಸೆ 4:7, 8, 10. [54]ಸಕಾರಾತ್ಮಕದ ಬಗ್ಗೆ ಫಿಲಿಪ್ಪಿ 3; 4. [55]ಬಿಡುಗಡೆಗೆ ಬಯಸಿದ್ದನು (ಫಿಲಿಪ್ಪಿ 1:25, 26; 2:24; ಫಿಲೆಮೋನ 22). ಅದು ಪ್ರಮುಖವಾಗಿ ರಲಿಲ್ಲ. [56]"ನೀರೋಗೆ" ಸುವಾರ್ತೆ ಹೇಳುವ ಅವಕಾಶವನ್ನು ಎದುರುನೋಡುತ್ತಿದ್ದನು. [57]ಅವನು ದೇವರನ್ನು ಮನುಷ್ಯರನ್ನು ಪ್ರೀತಿಸಿದನು ಆದ್ದರಿಂದ ವಿಧೇಯನಾಗಿ, ಜನ ಸೇವೆ ಮಾಡಿದನು ಎಂದು ನಿಮ್ಮ ಕೇಳುಗರಿಗೆ ತಿಳಿಸಿರಿ.



ಅದ್ರಿಯ ಸಮುದ್ರ
ರೋಮಾ
ಮೂರು ವಿಶ್ರಾಂತಿ ಗೃಹಗಳು
ಅಪ್ಪಿಸಿಯಾ ಮಾರುಕಟ್ಟೆ
ಪೊತಿಯೋಲ
ಇತಾಲ್ಯ
ಅಡ್ರಿಯಾಟಿಕ್ ಸಮುದ್ರ
ರೇಗಿಯಮ್
ಸಿಸಿಲಿ
ಸುರಕೂಸು
ಮಲ್ತಾ

## ಬಂಧನದ ಕುರಿತ ಪೌಲನ ಮನೋಭಾವ

ಅಪೊಸ್ತಲರ ಕೃತ್ಯದ ಕಡೆಯ ಭಾಗಗಳನ್ನು ನಾನು ಧ್ಯಾನಿಸುವಾಗ, ಅವನ ಬಂಧನದ ಕುರಿತು ಪೌಲನು ನೀಡಿದ ಕಾರಣಗಳ ಕುರಿತು ಆಶ್ಚರ್ಯ ಚಕಿತನಾಗುತ್ತೇನೆ. ಹಿರೀ ಸಭೆಯವರಿಗೆ "ನಾನು ಪುನರುತ್ಥಾನದ ನಿರೀಕ್ಷೆಗಾಗಿ ವಿಚಾರಕ್ಕೆ ಒಳಗಾಗಿರುವೆನು" ಅಂದನು (ಅಪೊಸ್ತಲರ ಕೃತ್ಯಗಳು 23:6; 24:21). ಅಗ್ರಿಪ್ಪನ ಮುಂದೆ "ಈಗಲೂ ದೇವರು ನಮ್ಮ ಪಿತೃಗಳಿಗೆ ಮಾಡಿದ ವಾಗ್ದಾನವುನೆರವೇರುವದೆಂಬ ನಿರೀಕ್ಷೆಯನ್ನು ಕುರಿತೇ ವಿಚಾರಿಸಲ್ಪಡುವವನಾಗಿ ಇಲ್ಲಿ ನಿಂತಿದ್ದೇನೆ" (26:6). ಅವನು ರೋಮಾಯವನ್ನು ತಲುಪಿದಾಗ, ಅಲ್ಲಿದ್ದ ಯೆಹೂದ್ಯ ಪ್ರಧಾನರಿಗೆ "ಈ ಕಾರಣದಿಂದ ನಾನು ನಿಮ್ಮನ್ನು ಕಂಡು ಮಾತಾಡಬೇಕೆಂದು ಕರೆಯಿಸಿದೆನು." ಇಸ್ರಾಯೇಲ್ ಜನರ ನಿರೀಕ್ಷೆಯ ನಿಮಿತ್ತವಾಗಿ ಈ ಬೇಡಿಯಿಂದ ಕಟ್ಟಲ್ಪಟ್ಟಿದ್ದೇನೆ ಎಂದು ಹೇಳಿದನು (28:20).

ಸೆರೆಮನೆಯ ಪತ್ರಿಕೆಯಗಳನ್ನು ಬರೆದಾಗ, "ಅನ್ಯ ಜನರ ನಿಮಿತ್ತ ಸೆರೆಯವನು" ಅಂದನು (ಎಫೆಸ 3:1). "ಕರ್ತನ ಸೆರೆಯವನು" (ಎಫೆಸ 4:1). "ಬೇಡಿಗಳು ಕ್ರಿಸ್ತನ ನಿಮಿತ್ತವೇ" (ಫಿಲಿಪ್ಪಿ 1:13). "ನಿಮಗೋಸ್ಕರ" (ಕೊಲೊಸ್ಸೆ 1:24), ಮತ್ತು "ಸತ್ಯಾರ್ಥದ"[1] ನಿಮಿತ್ತವೇ (ಕೊಲೊಸ್ಸೆ 4:3), ಫಿಲೆಮೋನನ ಪತ್ರಿಕೆಯಲ್ಲಿ "ಕ್ರಿಸ್ತ ಯೇಸುವಿನ ಸೆರೆಯವನು" ಎಂದಿರುವನು (ಫಿಲೆಮೋನ 1, 9). ಸುವಾರ್ತೆಗಾಗಿ ಬಂಧನದಲ್ಲಿರುವೆನು (ಫಿಲೆಮೋನ 13).

ಪೌಲನು ತನ್ನ ಬಂಧನವನ್ನು "ಅನ್ಯಾಯ" ಎಂಬುದಾಗಿ ಹೇಳಿಕೊಳ್ಳಲಿಲ್ಲ. (ಅದನ್ನು ದೇವರಿಂದ ದೊರೆತ ಶಿಕ್ಷೆ ಎಂದು ತಿಳಿಯದೆ), ಅದು ದೇವರ ಸದುದ್ದೇಶವೇ ಎಂದು ತಿಳಿದನು ಸುವಾರ್ತೆಯ ಯೋಜನೆ ಎಂದು, ಅದರಲ್ಲಿ ಅವನು ಕ್ರಿಸ್ತನಲ್ಲಿ ಪರಿಪಕ್ವತೆ ಹೊಂದಿ ದೇವರನ್ನು ಘನಪಡಿಸುವ ಯೋಜನೆಯನ್ನು ಕಂಡನು.

ಎಂದಾದರು ನೀವು, ನಿಮ್ಮ ಹತೋಟಿಯನ್ನು ಮೀರಿ "ಬಂಧನಕ್ಕೊಳಗಾದ" ಸನ್ನಿವೇಶವನ್ನು ಎದುರಿಸುವಾಗ, ಸಹಜವಾಗಿ ಪರಿಹರಿಸಲಾರದ ಸ್ಥಿತಿಗೆ ಬಂದಾಗ, ನೀವು ಸನ್ನಿವೇಶಕ್ಕೆ ಒಳಗಾದವರಲ್ಲ ಎಂಬ ನೀತಿಯನ್ನು ಅರಿಯಲು ಈ ಪಾಠವು ಸಹಕರಿಸುತ್ತದೆ, "ನೀವು ಕ್ರಿಸ್ತನಿಗಾಗಿ ಬಂಧನದಲ್ಲಿರುವಿರಿ." ಪೌಲನಂತೆ, ದೇವರು ನಿಮ್ಮಲ್ಲೂ ಯೋಜಿಸಿರ ಬಹುದು? (ರೋಮಾಪುರ 8:28)!

---

ಟಿಪ್ಪಣಿ

[1]ಕ್ರಿಸ್ತನ ಮರ್ಮ ಎಂಬುದು ಹಳೆ ಒಡಂಬಡಿಕೆಯಲ್ಲಿ ಮೆಸ್ಸಿಯನ ಕುರಿತ ಉಪದೇಶವನ್ನು ಮನುಷ್ಯರು ಸಂಪೂರ್ಣವಾಗಿ ಪೌಲನು ಮತ್ತು ಇತರ ದೈವ ಪ್ರೇರಿತ ಮನುಷ್ಯರಿಂದ ತಿಳಿಸುವವರೆಗೆ ಅರಿತಿರಲಿಲ್ಲ (ಎಫೆಸ 3:3-5).

# ಕೈಸರನ ವಂಶಾವಳಿ (ಮನೆತನ)

1. ಜೂಲಿಯಸ್, ಕ್ರಿ.ಪೂ. 49-44.
   a. ಪಾಂಪೆ ಮತ್ತು ಕ್ರಾಸಸ್ ಕ್ರಿ.ಪೂ. 78.
   b. ಸೈನ್ಯದ ಯಶಸ್ಸಿನಿಂದಾಗಿ, ರೋಮಾದ ನಾಯಕನಾದನು.
   c. ಕ್ರಿ.ಪೂ. 44ರಲ್ಲಿ ಬ್ರೂಟಸ್ ಮತ್ತು ಕಾಸಿಯಸ್‌ನಿಂದ ಕೊಲೆಗೀಡಾದನು.
   d. ಮರಣದ ನಾಲ್ಕು ತಿಂಗಳಲ್ಲಿ, ಒಂದು ಧೂಮಕೇತು ಕಾಣಿಸಿಕೊಂಡಾಗ, ಅವನಿಗಾಗಿ ಒಂದು ಆಟೋಟವನ್ನು ಮಾಡಲಾಯಿತು, ಅವನು "ದೈವೀಕ ಜೂಲಿಯಸ್" ಆದನು ಎಂಬ ಪ್ರತೀತ ಇದೆ.
2. ಅಗಸ್ತನು (ಅಕ್ಟೇವಿಯನ್), ಕ್ರಿ.ಪೂ. 31-ಕ್ರಿ.ಶ. 14.
   a. .ಕ್ರಿ.ಪೂ. 31ರಲಿ ಅಂತೋಣಿ ಮತ್ತು ಲೆಪಿದಸ್‌ನೊಂದಿಗೆ ಹೋರಾಟ - ಗೆಲುವು.
   b. ಜೂಲಿಯಸನ ದತ್ತು.
   c. ಅವನು ಆಡಳಿತಕ್ಕೆ ಬಂದು ತನ್ನನ್ನು ಅಗಸ್ತನೆಂದು ಕರೆದನು (ದೇವತೆಯ ನಾಮಾಂಕಿತ) ಚಕ್ರವರ್ತಿಗಳು ತಮ್ಮನ್ನು ದೇವತೆಗಳೆಂದು ತಿಳಿಯುವ ವಿಚಾರದ ಆರಂಭ ಕ್ರಿ.ಪೂ. 27ರಲ್ಲಿ ಚಕ್ರವರ್ತಿಯ ಸ್ಥಾನ.
   d. ಸಾಮಾನ್ಯವಾದ, ತಿಳುವಳಿಕೆಯ ಒಳ್ಳೆಯ ಆಡಳಿತಗಾರ, ರಾಜಕೀಯ ವ್ಯಕ್ತಿ ಜನರ ನೈತಿಕತೆಗೆ ಗಮನ ನೀಡಿದನು ಕ್ರಿ.ಶ. 14ರಲ್ಲಿ 76ನೇ ವಯಸ್ಸಿಗೆ ಮರಣ.
3. ಟೈಬೀರಿಯಸ್, ಕ್ರಿ.ಶ. 14-37.
   a. ಅಗಸ್ತನ ಮಗನು, ತನ್ನ ತಂದೆಯ ಆಡಳಿತ ಕೌಶಲ್ಯವನ್ನು ಹೊಂದಿರಲಿಲ್ಲ.
   b. ಸ್ನಾನಿಕನಾದ ಯೋಹಾನನ ಸಮಯದಲ್ಲಿ, ಯುದಾಯದ ಅಧಿಕಾರಿಯಾಗಿದ್ದನು, ಪಿಲಾತನ, ಯೇಸುವಿನ ಮರಣ ಹಾಗೂ ಪುನರುತ್ಥಾನದ ಕುರಿತು ಒಂದು ವಿಧಿಯನ್ನು ಮಾಡಿ, ತನ್ನನ್ನೆ ದೈವೀಕ ವ್ಯಕ್ತಿ ಎಂದು ಮಾಡಿಕೊಂಡಿದ್ದನು.
   c. ಸೇವೇರಸ್, ನಂತರದ ಚಕ್ರವರ್ತಿ (ಕ್ರಿ.ಶ. 222),
4. ಕಾಲಿಗುಲ, ಕ್ರಿ.ಶ. 37-41.
   a. ಟೈಬೀರಿಯಸ್‌ನ, ಅಣ್ಣನ ಮಗ ತಾನೂ ದೈವಿಕ ಮನುಷ್ಯ ಎಂದು ತಿಳಿದಿದ್ದನು. ತನ್ನ ಕುದುರೆಗೆ ತನ್ನ ಮಂತ್ರಿಮಂಡಲದ ಸದಸ್ಯತ್ವ ನೀಡಿದ್ದನು. ಯೆರೂಸಲೇಮಿನ ದೇವಾಲಯದಲ್ಲಿ ತನ್ನ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ಯೆಹೂದ್ಯರಿಗೆ ತಿಳಿಸಿದ್ದನು.
   b. ಅವನ ಬೆಂಗಾವಲಿನವರೇ ಅವನನ್ನು ಕೊಂದರು.
5. ಕ್ಲೌದ್ಯನು, ಕ್ರಿ.ಶ. 41-54.
   a. ಕಾಲಿಗುಲನ ಚಿಕ್ಕಪ್ಪ ನೀತಿಯ ಆಡಳಿತಾಧಿಕಾರಿಯಾಗಲು ಯತ್ನಿಸಿದನು. ಹೆರೋದ ಪ್ರಥಮ ಅಗ್ರಿಪ್ಪನ ಸಹಪಾಟಿ ಅವನನ್ನು ಯೆಹೂದ್ಯ ಹಾಗೂ ಸಮಾರ್ಯದ ದೇಶಾಧಿಕಾರಿಯನ್ನಾಗಿ ಮಾಡಿದನು.
   b. ಕ್ರಿ.ಶ. 49ರಲ್ಲಿ ರೋಮಾಯದಿಂದ ಯೆಹೂದ್ಯರನ್ನು ಹೊರಹಾಕಿದನು. "ಕ್ರಿಸ್ತನು" ಎಂಬವನ ವಿವಾದದ ನಿಮಿತ್ತ ಹೊರಹಾಕಲ್ಪಟ್ಟರು ಎಂಬ ಅಭಿಪ್ರಾಯವಿದೆ.
   c. ತನ್ನ ಮಗನಾದ "ನೀರೋ" ಚಕ್ರವರ್ತಿಯಾಗ ಬೇಕೆಂಬ ಆಶೆಯಿಂದ, ಅವನ

ನಾಲ್ಕನೆಯ ಹೆಂಡತಿಯು ಅವನಿಗೆ ವಿಷ ಹಾಕಿ ಸಾಯಿಸಿದಳು.

6. "ನೀರೋ," ಕ್ರಿ.ಶ. 54-68.
   a. ಅವನ ಸಾಕು ತಂದೆಗೆ ಮರಣವಾಗುವಾಗ, ಹದಿನೇಳು ವರ್ಷದವನಾಗಿದ್ದನು. ಸ್ಪೇನ್ ದೇಶದ ಸಲಹೆಗಾರರು ಅವನ ಉಪದೇಶಿಗಳಾಗಿದ್ದರು, ಗಲ್ಲಿಯೋನನ ಚಿಕ್ಕ ತಮ್ಮನಾಗಿದ್ದನು, ಅವನು ಅಖಾಯದ ಅಧಿಕಾರಿಯಾಗಿದ್ದನು.
   b. ನಂತರ ಅವನು ಮೂರ್ಖನಾಗಿ ವರ್ತಿಸಿ, ತನ್ನ ತಾಯಿಗೆ ವಿಷ ಹಾಕಿದನು; ತನ್ನ ಗರ್ಭಿಣಿ ಹೆಂಡತಿಗೆ ಕಾಲಿನಿಂದ ಒದ್ದನು. ಅಕ್ಟೇವಿಯನನ್ನು ಕೊಂದನು, ಅವನು ಉತ್ತಮ ಅಧಿಕಾರಿಗಳಿಗೆ ನಗೆಚಾಟಿಗೆ ಮಾಡಿದನು. ಸರ್ಕಸ್‌ಗಳಲ್ಲಿ ತನ್ನ ರಥದ ಓಟದಲ್ಲಿ ಪಾಲ್ಗೊಂಡನು.
   c. ಕ್ರಿ.ಶ. 64ರಲ್ಲಿ ರೋಮಾಯವನ್ನು ಸುಟ್ಟುಬಿಟ್ಟನು. ಅದನ್ನು ಪುನಃ ಕಟ್ಟಿ "ನೆರೋಪೊಲಿಸ್" ಎಂದು ಕರೆಯುವ ಯೋಜನೆ ಹೊಂದಿದ್ದನು. ಕ್ರೈಸ್ತರನ್ನು ಬೆದರಿಸಿ ಹಿಂಸಿಸಿದನು, ಕ್ರಿ.ಶ. 68ರಲ್ಲಿ ಆತ್ಮಹತ್ಯೆ ಮಾಡಿಕೊಂಡನು.
7. ವೆಸ್‌ಪಾಸಿಯನ್, ಕ್ರಿ.ಶ. 69-79.
   a. ಯಶಸ್ವಿಯಾದ ಸೇನಾಧಿಕಾರಿ, 69ರಲ್ಲಿ ಯೆಹೂದ್ಯರ ವಿರುದ್ಧದ ಹೋರಾಟ ದಿಂದ ಹಿಂದೆ ಕರೆಯಲ್ಪಟ್ಟು - "ನೀರೋ" ಮರಣದ ಒಂದು ವರ್ಷದ ಹಿಂದೆ ಚಕ್ರವರ್ತಿಯಾದನು, ತನ್ನ ಮಗನಾದ ಟೈಟಸ್ಸ್‌ನ್ನು ಯೆರೂಸಲೇಮನ್ನು ವಶಮಾಡಿಕೊಂಡಿದ್ದನು.
   b. ಟೈಬೀರಸ್‌ನ ಕಾಲದಲ್ಲಿ ಹಾಳಾದ ರೋಮಾಯವನ್ನು ಪುನಃ ಸ್ಥಾಪಿಸಿದನು. ಕೊಲೋಸಿಯಮನ್ನು ಹಾಗೂ ಟೈಟಸನ ಕಮಾನನ್ನು ನಿರ್ಮಿಸಿದನು.
8. ಟೈಟಸ್, ಕ್ರಿ.ಶ. 79-81.
   a. .ಕ್ರಿ.ಶ. 70ರಲ್ಲಿ ಯೊಸಲೇಮಿನ ಯೆಹೂದ್ಯರ ಮೇಲೆ ಜಯಸಾಧಿಸಿದನು. ಆ ಜಯದ ನಿಮಿತ್ತ ಟೈಟಸ್‌ನ ಕಮಾನನ್ನು ರೋಮಾದಲ್ಲಿ ನಿರ್ಮಿಸಲಾಯಿತು.
9. ದಾಮಿಟಿಯನ್, ಕ್ರಿ.ಶ. 81-96.
   a. ಟೈಟಸ್‌ನ ಚಿಕ್ಕ ತಮ್ಮ.
   b. ಕ್ರೂರವಾದ ದೆವ್ವ ಎಂದು ಹೇಳಿ ಯೆಹೂದ್ಯರನು, ಕ್ರೈಸ್ತರನ್ನು, ಹಾಗೂ ತನ್ನ ಕುಟುಂಬದವರನ್ನು ಕೊಂದುಹಾಕಿದನು.